ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಒಟ್ಟು ಪ್ರಶ್ನೆಗಳು – ೮೮**

**ಪಟ್ಟಿ – ೦೫**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೈದನೇ ಅಧಿವೇಶನ

**ಶುಕ್ರವಾರ, ದಿನಾಂಕ : ೨೭ನೇ ಜೂನ್, ೨೦೧೪**

---

## ಸಮೂಹ – V

೧. ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

೩. ವಸತಿ ಸಚಿವರು

೪. ಅಬಕಾರಿ ಸಚಿವರು

೫. ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

---

## ಭಿಕ್ಷೆ ಬೇಡುತ್ತಿರುವ ಮಕ್ಕಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೩೪ (೨೩೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಭಿಕ್ಷೆ ಬೇಡುತ್ತಿರುವ ಮಕ್ಕಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಭಿಕ್ಷೆ ಬೇಡುತ್ತಿರುವ ಎಷ್ಟು ಮಕ್ಕಳಿಗೆ ಕಳೆದ ವರ್ಷದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ ; ಈ ಮಕ್ಕಳಿಗೆ ಅವರ ಹಕ್ಕುಗಳನ್ನು ದೊರಕಿಸಿಕೊಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಕಳೆದ ವರ್ಷದಲ್ಲಿ ಎಷ್ಟು ಮಕ್ಕಳ ಸಾಗಣೆ ಪ್ರಕರಣಗಳು ವರದಿಯಾಗಿವೆ (ಜಿಲ್ಲಾವಾರು ವಿವರ ನೀಡುವುದು) ; ಈ ರೀತಿಯಾಗಿ ಕಳ್ಳಸಾಗಣೆಯಾದ ಎಷ್ಟು ಮಕ್ಕಳನ್ನು ರಕ್ಷಿಸಲಾಗಿದೆ; ಮಕ್ಕಳ ಕಳ್ಳ ಸಾಗಣೆ ಮಾಡಿದ ಎಷ್ಟು ಪ್ರಕರಣಗಳಲ್ಲಿ ಆಪಾದಿತರಿಗೆ ಶಿಕ್ಷೆಯಾಗಿದೆ ?

## ಶಿಕ್ಷಕ/ಉಪನ್ಯಾಸಕರಿಗೆ ನೀಡುವ ವಿಶೇಷ ಭತ್ಯೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೩೫ (೧೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಾಲಾ ಕಾಲೇಜುಗಳ ಶಿಕ್ಷಕ/ಉಪನ್ಯಾಸಕರಿಗೆ ರೂ. ೩೦೦/-, ೪೦೦/- ಮತ್ತು ೫೦೦/-ಗಳ ವಿಶೇಷ ಭತ್ಯೆಯನ್ನು ನೀಡುವಲ್ಲಿ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಆ) ಈ ವಿಶೇಷ ಭತ್ಯೆಯನ್ನು ಪ್ರಾಥಮಿಕ/ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ ಶಿಕ್ಷಕ/ಉಪನ್ಯಾಸಕರಿಗೆ ನೀಡುವಲ್ಲಿ ಅನುಸರಿಸಿದ ಮಾನದಂಡಗಳೇನು ;

(ಇ) ೬ನೇ ವೇತನ ಆಯೋಗದ ವರದಿಯ ಅನುಷ್ಠಾನದ ಬಳಿಕ ಶಿಕ್ಷಕ/ಉಪನ್ಯಾಸಕರ ವೇತನ ತಾರತಮ್ಯ ಸಮಸ್ಯೆಯನ್ನು ಮನಗಂಡು ಈ ವಿಶೇಷ ಭತ್ಯೆಯನ್ನು ನೀಡಿರುವುದರಿಂದ ಹಾಗೂ ೬ನೇ ವೇತನ ಸಮಿತಿಯ ಅನುಷ್ಠಾನದ ಬಳಿಕ ಶಿಕ್ಷಕ/ಉಪನ್ಯಾಸಕರುಗಳ ವೇತನ ಶ್ರೇಣಿಯಲ್ಲಿ ಯಾವುದೇ ಬದಲಾವಣೆಯಾಗ ದಿರುವುದರಿಂದ ಈ ವಿಶೇಷ ಭತ್ಯೆ ರಾಜ್ಯದ ಎಲ್ಲಾ ಶಿಕ್ಷಕ/ ಉಪನ್ಯಾಸಕರಿಗೆ ಸಮನಾಗಿ ಅನ್ವಯಿಸುವಂತೆ ಆದೇಶ ಹೊರಡಿಸಿ ತಾರತಮ್ಯ ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

## ವಿವಿಧ ನ್ಯೂನತೆಗಳಿರುವ ಮಕ್ಕಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :-**

೧೩೬ (೨೩೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ವಿವಿಧ ನ್ಯೂನತೆಗಳಿರುವ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಅವಶ್ಯವಿರುವ ವಿಶೇಷ ಬಿ.ಎಡ್., ಪದವಿ ಮತ್ತು ಡಿ.ಎಡ್., ಪದವಿಗಳ ನಡುವೆ ಇರುವ ತಾರತಮ್ಯ ಸರ್ಕಾರದ ಗಮನದಲ್ಲಿದೆಯೇ ;

(ಆ) ಈ ಎರಡೂ ಪದವಿಗಳನ್ನು ತತ್ಸಮಾನವೆಂದು ಘೋಷಿಸಿ ಸಮಾನ ನೇಮಕಾತಿ ಅವಕಾಶಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಲು ಸರ್ಕಾರದಿಂದ ಏನು ಕ್ರಮ ಕೈಗೊಳ್ಳಲಾಗುವುದು ?

## ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ನೀರಿನ ಸಮಸ್ಯೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೭ (೨೬೯) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರ್ಗಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ನೀರಿನ ಸಮಸ್ಯೆ ಎದುರಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಸಮಸ್ಯೆ ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು) ;

(ಇ) ನೀರಿನ ಕೊರತೆಯಿಂದಾಗಿ ವಿಶ್ವವಿದ್ಯಾಲಯದ ಕ್ಯಾಂಪಸಿನಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ನಿರ್ಮಾಣ ಕಾಮಗಾರಿ ಮೇಲೆ ಪರಿಣಾಮ ಬೀರುತ್ತಿದ್ದು ಸರಕಾರ ಇದನ್ನು ನಿವಾರಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ (ವಿವರ ನೀಡುವುದು) ?

## ಗುಲ್ಬರ್ಗಾ ವಿಮಾನ ನಿಲ್ದಾಣ ಕಾಮಗಾರಿ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೮ (೨೭೦) ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ವಿಮಾನ ನಿಲ್ದಾಣ ಯೋಜನೆ ಅರ್ಧಕ್ಕೆ ಸ್ಥಗಿತಗೊಂಡು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಯೋಜನೆ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಈ ಯೋಜನೆಯ ಅರ್ಧ ಕಾಮಗಾರಿ ಮಾಡಿರುವ ರಾಹಿ ಸಂಸ್ಥೆಗೆ ಸರ್ಕಾರ ದಂಡ ಹಾಕುವುದೇ ;

(ಇ) ಈ ಯೋಜನೆ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಹೊಸ ಆಯ್ಕೆಗಳು ಯಾವುದು ?

## ಅನಧಿಕೃತ ಮದ್ಯ ಮಾರಾಟ ಪ್ರಕರಣಗಳು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೩೯ (೨೭೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಿಂದ ಅನಧಿಕೃತವಾಗಿ ಮದ್ಯ ಸಾರಾಯಿ ಮಾರಾಟ ಮಾಡುತ್ತಿದ್ದ ಪ್ರಕರಣಗಳನ್ನು ಪತ್ತೆ ಹಚ್ಚಿ ದಾಖಲು ಮಾಡಿಕೊಂಡ ಪ್ರಕರಣಗಳೆಷ್ಟು ;

(ಆ) ಅನಧಿಕೃತ ಮಾರಾಟಗಾರರ ಮೇಲೆ ಕ್ರಮ ಜರುಗಿಸಿದ ಪ್ರಕರಣಗಳೆಷ್ಟು ;

(ಇ) ನಶಾ ಮುಕ್ತ ಕೇಂದ್ರದಲ್ಲಿ ಎಷ್ಟು ಜನರಿಗೆ ಚಿಕಿತ್ಸೆ ಮತ್ತು ತಿಳಿವಳಿಕೆ ನೀಡಲು ಸರಕಾರ ಕೈಗೊಂಡ ಕ್ರಮಗಳೇನು ;

(ಈ) ಈ ಅಕ್ರಮ ಸಾರಾಯಿ ಮಾರಾಟ ಮತ್ತು ಚಟುವಟಿಕೆಗಳಿಂದ ಸರಕಾರಕ್ಕೆ ಬಂದ ಆದಾಯವೆಷ್ಟು ; ಅಕ್ರಮ ಸಾರಾಯಿ ಮಾರಾಟ ಮಾಡುವವರ ಮೇಲೆ ಯಾವ ರೀತಿಯ ಕ್ರಮ ಜರುಗಿಸಲಾಗಿದೆ ?

## ಜಲ ನಿರ್ಮಲ ಯೋಜನೆ

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :-

೧೪೦ (೨೭೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ೨೦೧೨-೧೩ನೇ ಸಾಲಿನಿಂದ ಇಲ್ಲಿಯವರೆಗೆ ಜಲ ನಿರ್ಮಲ ಯೋಜನೆ ಅಡಿಯಲ್ಲಿ ಮಂಜೂರಾಗಿರುವ ಕುಡಿಯುವ ನೀರಿನ ಕಾಮಗಾರಿಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ವಿವರಿಸುವುದು) ;

(ಆ) ಈ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣವಾಗಿವೆ ಮತ್ತು ಎಷ್ಟು ಅಪೂರ್ಣವಾಗಿವೆ (ವಿವರ ನೀಡುವುದು) ;

(ಇ) ಈ ಜಿಲ್ಲೆಗಳಲ್ಲಿ ಜಲ ನಿರ್ಮಲ ಯೋಜನೆಯ ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

## ಬೇಸಿಗೆಯಲ್ಲಿ ಕುಡಿಯುವ ನೀರು ಸರಬರಾಜು

**ಶ್ರೀ ಅಲ್ಲಮ ಪ್ರಭುಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)** :-

೧೪೧ (೨೦೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರತಿ ಬೇಸಿಗೆಯಲ್ಲಿ ಗುಲ್ಬರ್ಗಾ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸಮಸ್ಯೆ ಎದುರಿಸುವುದಕ್ಕಾಗಿ ಕ್ರಿಯಾ ಯೋಜನೆ ರೂಪಿಸಲಾಗಿದೆಯೇ ; ರೂಪಿಸಿದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) ಈ ಸಮಸ್ಯೆಯ ಪರಿಹಾರಕ್ಕಾಗಿ ಎಷ್ಟು ಅನುದಾನ ಅಗತ್ಯವಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಸಮಸ್ಯೆ ಉಲ್ಬಣಗೊಳ್ಳುವ ಮೊದಲೇ ಸರ್ಕಾರ ಅನುದಾನ ಬಿಡುಗಡೆ ಮಾಡುವುದೇ ?

## ಅಂಗನವಾಡಿ ಶಾಲೆಗಳು

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೨ (೨೦೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಾಲೆಗಳೆಷ್ಟು ; ಸ್ವಂತ ಕಟ್ಟಡ ಹೊಂದಿರುವ ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಶಾಲೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಸ್ವಂತ ಕಟ್ಟಡ ಹೊಂದಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ತಾಲ್ಲೂಕುವಾರು ವಿವರ ನೀಡುವುದು) ?

## ನಿರ್ಮಿತ ಕೇಂದ್ರದ ಕಳಪೆ ಕಾಮಗಾರಿ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩ (೨೦೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಾಣಗೊಂಡ ಅನೇಕ ಕಾಮಗಾರಿಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಯಾವ ಯಾವ ಕಾಮಗಾರಿಗಳು ಕಳಪೆಯಾಗಿವೆ (ತಾಲ್ಲೂಕುವಾರು ವಿವರ ನೀಡುವುದು) ;

(ಇ) ಸಂಬಂಧಪಟ್ಟವರ ಮೇಲೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ;

(ಈ) ಇಂತಹ ಕಾಮಗಾರಿ ನಿರ್ವಹಿಸಿದ ನಿರ್ಮಿತಿ ಕೇಂದ್ರಕ್ಕೆ ಇನ್ನು ಮುಂದೆ ಕಾಮಗಾರಿಗಳನ್ನು ಕೊಡಬಾರದೆಂದು ಸರ್ಕಾರ ಗಮನ ಹರಿಸಿದೆಯೇ ?

## ರೈಲ್ವೆ ಯೋಜನೆಗಳ ಭೂಮಿ ಸ್ವಾಧೀನ

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೪ (೨೦೬) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು–ಚಿತ್ರದುರ್ಗ ಮತ್ತು ತುಮಕೂರು–ರಾಯದುರ್ಗ ರೈಲ್ವೆ ಯೋಜನೆ ಯಾವ ಹಂತದಲ್ಲಿದೆ ;

(ಆ) ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ; ಈ ಪ್ರಕ್ರಿಯೆ ಯಾವಾಗ ಮುಗಿಯುತ್ತದೆ ;

(ಇ) ಅದಕ್ಕೆ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ಎಷ್ಟು ಹಣ ತೊಡಗಿಸಿದೆ;

(ಈ) ಈ ಯೋಜನೆ ಯಾವಾಗ ಮುಗಿಯುತ್ತದೆ ?

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳು

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೪೫ (೨೩೦) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿ.ಟಿ.ಯು ಸಂಯೋಜನೆ ಪಡೆದ ಕಾಲೇಜುಗಳಲ್ಲಿ ವರ್ಷದಲ್ಲಿ ಎಷ್ಟು ದಿನ ತರಗತಿಗಳು ನಡೆಯುತ್ತವೆ ;

(ಆ) ಘೋಷಿಸಿದ ರಜಾ ದಿನಗಳು ಎಷ್ಟು ;

(ಇ) ಪ್ರತಿ ವರ್ಷ ಪರೀಕ್ಷೆ ನಡೆಸುವುದಕ್ಕೆ ಮೀಸಲಿಟ್ಟ ಅವಧಿ ಎಷ್ಟು ;

(ಈ) ಪ್ರತಿ ಸೆಮಿಸ್ಟರಿನಲ್ಲಿ ಪಠ್ಯಕ್ರಮ ಪೂರೈಸಲು ಈ ಅವಧಿ ಸಾಕಾಗುತ್ತದೆಯೇ ?

## ಅಬಕಾರಿ ಸಿಬ್ಬಂದಿ ವರ್ಗ ಮತ್ತು ಮೀಸಲಾತಿ ಅನುಷ್ಠಾನ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೬ (೨೦೯) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಬಕಾರಿ ಇಲಾಖೆಯಲ್ಲಿರುವ ಒಟ್ಟು ಗಾರ್ಡ್ಸ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು ಮತ್ತು ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು ;

(ಆ) ಈ ಹುದ್ದೆಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ;

(ಇ) ಈ ಹುದ್ದೆಗಳಲ್ಲಿ ಕಡ್ಡಾಯವಾಗಿ ಮೀಸಲಾತಿಯ ಅನುಷ್ಠಾನ ಆಗುತ್ತಿದೆಯೇ ;

(ಈ) ಸದರಿ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಿಂಬಾಕಿ (ಬ್ಯಾಕ್‌ಲಾಗ್) ಇದೆಯೇ ; ಇದ್ದಲ್ಲಿ ಯಾವಾಗ ಈ ಹುದ್ದೆಗಳನ್ನು ತುಂಬಲಾಗುವುದು ?

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭ (೨೦೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಎಷ್ಟು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದೆ (ಕಾಲೇಜುವಾರು ವಿವರ ನೀಡುವುದು) ;

(ಆ) ಇಲ್ಲಿಯವರೆಗೆ ಈ ಕಾಮಗಾರಿಗಳಲ್ಲಿ ಬಿಡುಗಡೆಗೊಳಿಸಲಾದ ಹಣದ ಮೊತ್ತವೆಷ್ಟು ; ಹಾಗೆಯೇ ನಿಗದಿಪಡಿಸಲಾದ ಮೊತ್ತವೆಷ್ಟು ;

(ಇ) ಈ ಕಾಮಗಾರಿ ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯೊಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ ?

## ಗಾರ್ಡ್ಸ್ ಹುದ್ದೆಯಿಂದ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ

**ಶ್ರೀ ಡಿ. ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮ (೨೧೦) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಬಕಾರಿ ಇಲಾಖೆಯಲ್ಲಿ ಗಾರ್ಡ್ಸ್‌ಗಳ ಹುದ್ದೆಯಿಂದ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ನಿಯಮ–೩೨ರ ಅಡಿಯಲ್ಲಿ ಬಡ್ತಿ ನೀಡಲಾಗುತ್ತಿದೆಯೇ ;

(ಆ) ಈ ಹುದ್ದೆಗಳಿಗೆ ಬಡ್ತಿ ನೀಡುವಾಗ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಮೀಸಲಾತಿ (ರೋಸ್ಟರ್ ಪದ್ಧತಿ) ಅನುಸರಿಸಲಾಗುತ್ತಿದೆಯೇ ;

(ಇ) ನಿಯಮ–೩೨ರ ಪ್ರಕಾರ ಯಾವುದೇ ಹುದ್ದೆಗೆ ಬಡ್ತಿ ನೀಡಿ ೬ ತಿಂಗಳಿಗಿಂತ ಮುಂದುವರಿಸುವ ಅವಕಾಶವಿರುವುದಿಲ್ಲವಾದರೂ, ಈ ಇಲಾಖೆಯಲ್ಲಿ ನಿಯಮ–೩೨ರಡಿ ಬಡ್ತಿ ಹೊಂದಿದ ಅನೇಕರು ಕಳೆದ ಐದು–ಹತ್ತು ವರ್ಷಗಳಿಂದ ಮುಂದುವರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಮುಂದುವರಿಕೆಯಿಂದ ಮೀಸಲಾತಿ ನಿಯಮವು ಉಲ್ಲಂಘಿಸಿದಂತಾಗುವುದಿಲ್ಲವೇ ; ಮತ್ತು ಮೀಸಲಾತಿ ಫಲಾನುಭವಿಗಳಿಗೆ ಬಡ್ತಿಯಲ್ಲಿ ಅನ್ಯಾಯ ಆಗುವುದಿಲ್ಲವೇ ?

## ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗೆ ಬಿಡುಗಡೆಯಾದ ಅನುದಾನ

**ಶ್ರೀ ಡಿ. ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೯ (೨೦೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಐದು ವರ್ಷದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ವರ್ಷವಾರು ವಿವರ ನೀಡುವುದು) ;

(ಆ) ಈ ಅನುದಾನಗಳನ್ನು ಯಾವ ಯಾವ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗುತ್ತಿದೆ ;

(ಇ) ಸರ್ಕಾರದ ಮಾನದಂಡದ ಪ್ರಕಾರ ಈ ಹಣ ಉಪಯೋಗ ವಾಗಿದೆಯೇ ;

(ಈ) ಕಾಮಗಾರಿ ನಡೆಯದೆ ಹಣ ದುರುಪಯೋಗ ಆಗಿರುವ ಕೆಲವು ಪ್ರಕರಣಗಳ ಬಗ್ಗೆ ದೂರು ಬಂದಿದ್ದರೂ ಹಣ ಬಿಡುಗಡೆ ಮಾಡಲು ಕಾರಣವೇನು ;

(ಉ) ಈ ಕಾಮಗಾರಿಗಳಿಗೆ ಸಂಬಂಧಿಸಿದ ದೂರು ಇರುವ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಯಾರು ಯಾರು ; ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು ;

(ಊ) ದುರುಪಯೋಗ ಮಾಡಿರುವವರಿಂದ ಹಣ ವಸೂಲು ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಯಾರ್‍ಯಾರಿಂದ ಎಷ್ಟು ಹಣ ವಸೂಲಿ ಮಾಡಲಾಗಿದೆ ?

## ಶಿಕ್ಷಕರ ಖಾಲಿ ಹುದ್ದೆಗಳು

**ಶ್ರೀ ಡಿ. ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦ (೨೧೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ವಿದ್ಯಾರ್ಥಿಗಳಿಗೆ ತೀವ್ರ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಖಾಲಿ ಹುದ್ದೆಗಳನ್ನು ವಿಶೇಷ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದೇ ;

(ಇ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅರೆ ಕಾಲಿಕ, ಹಂಗಾಮಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ; ಇವರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ನೌಕರರ ಸಂಖ್ಯೆ ಎಷ್ಟು ;

(ಈ) ಇಲಾಖೆಯಲ್ಲಿ ತರಬೇತಿ ಪಡೆಯದ ಉಪಾಧ್ಯಾಯರ ಸಂಖ್ಯೆ ಎಷ್ಟು ; ಇವರು ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ ; ಅವರನ್ನೇಕೆ ಖಾಯಂ ಮಾಡುತ್ತಿಲ್ಲ ?

## ಅಕ್ರಮ ಹೋಂ ಸ್ಟೇ ಮತ್ತು ರೆಸಾರ್ಟ್‌ಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧ (೨೨೮) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರವಾಸಿ ತಾಣಗಳು ಮತ್ತು ಪ್ರವಾಸಿಗರನ್ನು ದೃಷ್ಟಿಯಲ್ಲಿರಿಸಿ ರೆಸಾರ್ಟ್, ಹೋಂ ಸ್ಟೇಗಳನ್ನು ಖಾಸಗಿಯವರು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಈ ಕುರಿತು ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು ;

(ಆ) ಖಾಸಗಿಯಾಗಿ ಈ ರೀತಿಯಲ್ಲಿ ರೆಸಾರ್ಟ್, ಹೋಂ ಸ್ಟೇಗಳನ್ನು ಪ್ರಾರಂಭಿಸಲು ಸರ್ಕಾರವು ಅನುಸರಿಸುತ್ತಿರುವ ನಿಯಮಾವಳಿ/ ಮಾರ್ಗಸೂಚಿಯೇನು (ಸಂಪೂರ್ಣ ಮಾಹಿತಿ ಒದಗಿಸುವುದು) ;

(ಇ) ಇಂತಹ ಖಾಸಗಿ ರೆಸಾರ್ಟ್, ಹೋಂ ಸ್ಟೇಗಳಲ್ಲಿ ಪ್ರವಾಸಿಗರಿಗೆ ಉತ್ತಮ ಸೌಲಭ್ಯ ಮತ್ತು ಕೈಗೆಟುಕುವ ದರ ನಿಗದಿ ಬಗ್ಗೆ ಯಾವುದಾದರೂ ಯೋಜನೆಯನ್ನು ಸರ್ಕಾರ ಆಲೋಚಿಸಿದೆಯೇ ;

(ಈ) ಹಲವಾರು ಪ್ರವಾಸಿತಾಣ, ಗಿರಿಧಾಮಗಳಲ್ಲಿ ಅನುಮತಿ ರಹಿತವಾಗಿ, ಅಕ್ರಮವಾಗಿ ರೆಸಾರ್ಟ್, ಹೋಂ ಸ್ಟೇಗಳನ್ನು ನಡೆಸುತ್ತಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ (ಹಾಗಿದ್ದಲ್ಲಿ, ಅವುಗಳ ಸಂಪೂರ್ಣ ಮಾಹಿತಿ ನೀಡುವುದು ; ಈ ಅಕ್ರಮ ನಿರ್ಮಾಣ ಚಟುವಟಿಕೆ ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು) ?

## ಪ್ರವಾಸಿ ಕೇಂದ್ರವಾಗಿ ನಂದಗಡವನ್ನು ಅಭಿವೃದ್ಧಿಪಡಿಸುವುದು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೨ (೩೦೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ಬೆಳಗಾವಿ ಜಿಲ್ಲೆಯ ನಂದಗಡವನ್ನು ಪ್ರವಾಸಿ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಅಭಿವೃದ್ಧಿ ಪಡಿಸಲು ರೂಪಿಸಿರುವ ಯೋಜನೆಗಳೇನು ; ಅದಕ್ಕೆ ತಗಲುವ ವೆಚ್ಚ ಎಷ್ಟು ;

(ಇ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ವಿವರ ಒದಗಿಸುವುದು) ?

## ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೩ (೨೧೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಗೋಕಾಕ ಫಾಲ್ಸ್ ಪ್ರವಾಸಿ ಕೇಂದ್ರದ ಅಭಿವೃದ್ಧಿ ಅಗತ್ಯವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಪ್ರವಾಸಿಗರಿಗೆ ಕೈಗೊಂಡ ಮೂಲಭೂತ ಸೌಲಭ್ಯಗಳೇನು ; (ವಿವರ ನೀಡುವುದು) ಈಗಾಗಲೇ ಸೌಲಭ್ಯಗಳನ್ನು ಕೈಗೊಳ್ಳಲು ಮಾಡಿದ ವೆಚ್ಚವೆಷ್ಟು (ವಿವರ ನೀಡುವುದು) ;

(ಆ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನನ್ನು ಗಲ್ಲಿಗೇರಿಸಿದ ಜಿಲ್ಲೆಯ ನಂದಗಡವನ್ನು ಪ್ರವಾಸಿ ಸ್ಥಳವಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಹಾಗಿದ್ದಲ್ಲಿ, ಅಭಿವೃದ್ಧಿ ಪಡಿಸಲು ರೂಪಿಸಿದ ಯೋಜನೆ ಏನು ; ಅದಕ್ಕೆ ತಗಲುವ ವೆಚ್ಚ ಎಷ್ಟು ; ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ವಿವರ ಒದಗಿಸುವುದು) ;

(ಇ) ಬ್ರಿಟಿಷರ ಜೊತೆ ಸ್ವಾತಂತ್ರ್ಯಕ್ಕಾಗಿ ಕೆಚ್ಚೆದೆಯಿಂದ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮಳ ಜನ್ಮಸ್ಥಳ ಕಾಕತಿ ಗ್ರಾಮವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರಕಾರದ ಮುಂದೆ ಇದೆಯೇ ;

(ಈ) ಹಾಗಿದ್ದಲ್ಲಿ, ಅಲ್ಲಿ ಕೈಗೊಳ್ಳಲು ರೂಪಿಸಿದ ಯೋಜನೆಗಳು ಯಾವುವು; ಅದಕ್ಕೆ ತಗಲುವ ವೆಚ್ಚ ಎಷ್ಟು ; ಅಭಿವೃದ್ಧಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ ಯಾವಾಗ ಪೂರ್ಣಗೊಳಿಸಲಾಗುವುದು (ವಿವರಣೆ ನೀಡುವುದು) ?

## ನೂತನವಾಗಿ ಕೈಗೊಳ್ಳಲಿರುವ ರೈಲ್ವೆ ಕಾಮಗಾರಿಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೪ (೨೧೪) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ರಾಜ್ಯದಲ್ಲಿ ನೂತನವಾಗಿ ಕೈಗೊಳ್ಳಲಿರುವ ರೈಲ್ವೆ ಕಾಮಗಾರಿಗಳು ಎಷ್ಟು ; ಇಂತಹ ಕಾಮಗಾರಿಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ಎಷ್ಟು ; ಈ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸರ್ಕಾರವು ಯಾವ ಅನುಪಾತದ ಮೇಲೆ ಅನುದಾನ ಬಿಡುಗಡೆ ಮಾಡಬೇಕಾಗುವುದು ; ರಾಜ್ಯ ಸರ್ಕಾರವು ಈಗ ಯಾವ ಯಾವ ಕಾಮಗಾರಿಗಳಿಗೆ ತನ್ನ ಪಾಲಿನ ಅನುದಾನ ಬಿಡುಗಡೆ ಮಾಡಿದೆ (ವಿವರ ಒದಗಿಸುವುದು) ?

## ಗ್ರಾಮ ಪಂಚಾಯತ್‌ಗಳಲ್ಲಿ ವೈಫೈ ನೆಟ್‌ವರ್ಕ್ (Wifi Network) ಸೌಲಭ್ಯ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೫ (೨೬೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹೆಚ್ಚು

ಕ್ಷಮತೆಯ ವೈಫೈ ಅಂತರ್ಜಾಲ (Wifi Network) ಇಲ್ಲದೆ ಇರುವುದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರ ಏನು ಕ್ರಮ ಜರುಗಿಸಲಿದೆ ;

(ಇ) ಇಲ್ಲಿ ಕಾರ್ಯನಿರ್ವಹಿಸುವ ಕಂಪ್ಯೂಟರ್ ಆಪರೇಟರ್‌ಗಳನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ಮುಂದಿದೆಯೇ ?

## ಗ್ರಾಮ ಪಂಚಾಯತ್‌ಗಳ ಮರು ವಿಂಗಡಣೆ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೬ (೨೬೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳ ಮರು ವಿಂಗಡಣೆ ಬಗ್ಗೆ ಮಾಜಿ ಶಾಸಕರಾದ ಶ್ರೀ ನಂಜಯ್ಯಮಠ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು ನಿಜವೇ ;

(ಆ) ಇಂತಹ ಗ್ರಾಮ ಪಂಚಾಯತ್‌ಗಳನ್ನು ಮರು ವಿಂಗಡಣೆ ಮಾಡುವ ವಿಚಾರದಲ್ಲಿ ಸರ್ಕಾರದ ಮಾನದಂಡಗಳೇನು ;

(ಇ) ಈ ಸಮಿತಿಯು ಎಷ್ಟು ದಿನಗಳಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ ?

## ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೫೭ (೨೧೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ತಾಲ್ಲೂಕು, ಸಂತೇಮರಹಳ್ಳಿ ಬಳಿ ಇರುವ ಚುಂಗಡಿಪುರದಲ್ಲಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡ ಶಿಥಿಲಗೊಂಡು ಕುಸಿದು ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೂಡಲೇ ಈ ಶಾಲೆಯನ್ನು ದುರಸ್ಥಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಮಳೆಗಾಲ ಸಮೀಪಿಸುತ್ತಿರುವುದರಿಂದ ಶಾಲೆ ಕುಸಿದು ಮಕ್ಕಳಿಗೆ, ಶಿಕ್ಷಕರಿಗೆ ಅಪಾಯ ಸಂಭವಿಸುವ ಸಾಧ್ಯತೆ ಇರುವುದರಿಂದ ಕೂಡಲೇ ಈ ಶಾಲಾ ಕಟ್ಟಡದ ದುರಸ್ಥಿ ಕ್ರಮ ಕೈಗೊಳ್ಳಲಾಗುವುದೇ ?

## ಹಳ್ಳಿಗಳಲ್ಲಿ ಕುಡಿಯುವ ನೀರಿನ ಪೂರೈಕೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೫೮ (೨೧೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಾಮರಾಜನಗರ ಜಿಲ್ಲೆಯ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ (ತಾಲ್ಲೂಕುವಾರು ಹಳ್ಳಿಗಳ ವಿವರ ಒದಗಿಸುವುದು) ;

(ಆ) ಈ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಸಲು ಕೈಗೊಂಡಿರುವ ಕ್ರಮಗಳೇನು ; ಇದಕ್ಕಾಗಿ ಜಿಲ್ಲಾ ಪಂಚಾಯತಿಯಲ್ಲಿ ಮತ್ತು ಜಿಲ್ಲಾಧಿಕಾರಿಗಳ ಬಳಿ ಕಾಯ್ದಿರಿಸಿರುವ, ಮಂಜೂರು ಮಾಡಿ ಬಿಡುಗಡೆ ಮಾಡಿರುವ ಹಣವೆಷ್ಟು ;

(ಇ) ಚಾಮರಾಜನಗರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಇರುವ ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರಿನ ಪೂರೈಕೆಗೆ ಕೈಗೊಂಡಿರುವ ಕ್ರಮಗಳೇನು (ವಿವರಿಸುವುದು) ?

## ಕುಡಿಯುವ ನೀರಿನ ಸಮಸ್ಯೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೫೯ (೨೧೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ತಾಲ್ಲೂಕುವಾರು ಆಶ್ರಯದ ಯೋಜನೆಯ ವಿವರಗಳೇನು ;

(ಆ) ರಾಜ್ಯದಲ್ಲಿ ತಾಲ್ಲೂಕುವಾರು ಇರುವ ತೆರೆದ ಬಾವಿಗಳೆಷ್ಟು ; (ವಿವರ ನೀಡುವುದು) ಕೊಳವೆ ಬಾವಿಗಳೆಷ್ಟು ; ಓವರ್‌ಹೆಡ್ ಟ್ಯಾಂಕ್‌ಗಳೆಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಈ) ಕುಡಿಯುವ ನೀರಿನ ಯೋಜನೆಯನ್ನು ಯಾವ ಯಾವ ಹಂತದಲ್ಲಿ ಯಾರ್‍ಯಾರು ಅನುಷ್ಠಾನ ಮಾಡುತ್ತಾರೆ ;

(ಉ) ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಪಾತ್ರವೇನು ;

(ಊ) ಗ್ರಾಮೀಣ ಪ್ರದೇಶದಲ್ಲಿ ಪ್ರತಿ ವ್ಯಾಪ್ತಿಗೆ ದಿನಕ್ಕೆ ಎಷ್ಟು ಲೀಟರ್ ನೀರು ಕೊಡುವ ಯೋಜನೆಯನ್ನು ಸರ್ಕಾರ ಅನುಸರಿಸುತ್ತಿದೆ:

(ಋ) ರಾಜ್ಯದಲ್ಲಿ LPCD ಸರಾಸರಿ ನೀರಿನ ಗುರಿ ಪ್ರತಿ ವ್ಯಾಪ್ತಿಗೆ ತಲುಪುತ್ತಿದೆಯೇ (ಪೂರ್ಣ ವಿವರ ನೀಡುವುದು) ?

## ಗ್ರಾಮ ಸಭೆಗಳಲ್ಲಿ ನ್ಯಾಯ ಪಂಚಾಯತ್ ಯೋಜನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೦ (೨೨೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮ ಸಭೆಗಳಲ್ಲಿ ನ್ಯಾಯ ಪಂಚಾಯತ್ ಯೋಜನೆಯನ್ನು ಸರಕಾರ ರೂಪಿಸಿದೆಯೇ ;

(ಆ) ಇಂತಹ ಜನತಾ ನ್ಯಾಯಾಲಯಗಳ ಉದ್ದೇಶವೇನು ;

(ಇ) ಇದರಿಂದ ಜನಸಾಮಾನ್ಯರಿಗಾಗುವ ಸಹಾಯವೇನು ;

(ಈ) ಇರುವ ಮಾಹಿತಿಯಂತೆ ; ಗ್ರಾಮ ಪಂಚಾಯತ್ ಲೋಕ್ ಅದಾಲತ್ ಎಂದು ಯಾವಾಗ ಪ್ರಾರಂಭಿಸಲಾಗುವುದು (ವಿವರ ನೀಡುವುದು)?

## ಸಾಲುಮರದ ತಿಮ್ಮಕ್ಕನಿಗೆ ಬದಲಿ ಮನೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೧ (೨೧೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪರಿಸರವಾದಿ ಸಾಲುಮರದ ತಿಮ್ಮಕ್ಕನಿಗೆ ಸರ್ಕಾರ ನೀಡಿದ ನೆರವು ಏನು ;

(ಆ) ತಿಮ್ಮಕ್ಕನಿಗೆ ಇತರರಿಗೆ ನೀಡುವ ನೆರವಿನ ರೀತಿಯ ಬದಲಾಗಿ ಬದುಕಿರುವವರೆಗೆ ಹೆಚ್ಚುವರಿ ಮಾಸಾಶನ ನೀಡಲು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ತಿಮ್ಮಕ್ಕನಿಗೆ ಸೂರ್ಯಸಿಟಿಯಲ್ಲಿ ಕೊಟ್ಟಿರುವ ಮನೆ ವಾಸ್ತವ್ಯಕ್ಕೆ ಯೋಗ್ಯವಾಗಿರದಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ಇದ್ದಲ್ಲಿ, ಬದಲಿ ಮನೆಯನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಮಕ್ಕಳನ್ನು ಶಾಲೆಗೆ ಕರೆತರುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೨ (೨೨೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ೧.೫೦ ಕೋಟಿ ಮಕ್ಕಳು ಶಾಲೆಯ ಶಿಕ್ಷಣದಿಂದ ಹೊರಗುಳಿದಿದ್ದಾರೆ ಎಂಬುದು ಸತ್ಯವೇ ; ಇವುಗಳಲ್ಲಿ ಹೈದ್ರಾಬಾದ್

ಕರ್ನಾಟಕ ಭಾಗದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಹೆಚ್ಚೆಂಬುದು ನಿಜವೇ ;

(ಆ) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಿಕ್ಷಣ ವ್ಯವಸ್ಥೆಯಡಿ ಶಾಲೆಗೆ ಕರೆತರಲು ಸರ್ಕಾರದ ಕ್ರಮವೇನು (ಪೂರ್ಣ ಮಾಹಿತಿ ನೀಡುವುದು) ?

## ಅಂಗನವಾಡಿಗಳ ಸಮಸ್ಯೆಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೬೩ (೨೨೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಆ) ಸದರಿ ಅಂಗನವಾಡಿಗಳಲ್ಲಿ ಸ್ವಂತ ಕಟ್ಟಡವಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಎಷ್ಟು ಅಂಗನವಾಡಿಗಳಲ್ಲಿ ಶಿಕ್ಷಕಿಯರ/ಕಾರ್ಯಕರ್ತೆಯರ ಕೊರತೆ ಇದೆ ;

(ಈ) ಒಟ್ಟು ಅಂಗನವಾಡಿಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಉ) ಸದರಿ ಮಕ್ಕಳಲ್ಲಿ ಅಪೌಷ್ಠಿಕತೆಯಿಂದ ಬಳಲುವ ಮಕ್ಕಳ ಸಂಖ್ಯೆ ಎಷ್ಟು ;

(ಊ) ಒಟ್ಟಾರೆ ಅಂಗನವಾಡಿಗಳ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

**ಸಾಂಸ್ಕೃತಿಕ ಭವನಗಳ ನಿರ್ಮಾಣ**

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೧೬೪ (೨೨೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಸಾಂಸ್ಕೃತಿಕ ಭವನಗಳ ನಿರ್ಮಾಣದ ಗುರಿ ಇಟ್ಟುಕೊಳ್ಳಲಾಗಿದೆಯೇ ; ಇದ್ದಲ್ಲಿ ವಿವರ ನೀಡುವುದು) ;

(ಆ) ಇಲ್ಲಿಯವರೆಗೆ ಎಷ್ಟು ಭವನಗಳನ್ನು ನಿರ್ಮಿಸಲಾಗಿದೆ (ವಿವರ ನೀಡುವುದು) ;

(ಇ) ಈ ಭವನಗಳ ನಿರ್ಮಾಣದಲ್ಲಿ ಅಕ್ರಮ ಕಂಡು ಬಂದಿರುವುದು ನಿಜವೇ (ವಿವರ ನೀಡುವುದು) ?

**ವಿಮಾನ ನಿಲ್ದಾಣದ ಕಾಮಗಾರಿ ಸ್ಥಗಿತ**

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೬೫ (೨೨೭) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗದಲ್ಲಿ ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣದ ಕಾಮಗಾರಿಯು ಕಳೆದ ೨–೩ ವರ್ಷಗಳಿಂದ ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಸರ್ಕಾರ ಈವರೆಗೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) ;

(ಇ) ಹಾಗಿದ್ದಲ್ಲಿ ಸದರಿ ವಿಮಾನ ನಿಲ್ದಾಣವು ಎಂದಿನಿಂದ ಸಾರ್ವಜನಿಕರ ಸೇವೆಗೆ ಲಭ್ಯವಾಗುವುದು (ವಿವರ ನೀಡುವುದು) ?

## ಜೇನು ಕಲ್ಲಮ್ಮ ದೇವಸ್ಥಾನದ ಅಭಿವೃದ್ಧಿ

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೬ (೨೨೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ಕೋಡೂರು ಜೇನುಕಲ್ಲಮ್ಮ ದೇವಸ್ಥಾನಕ್ಕೆ ಸಹಾಯಕ ನಿರ್ದೇಶಕರು, ಪ್ರಾದೇಶಿಕ ಪ್ರವಾಸಿ ಕಛೇರಿ ಇವರು ಭೇಟಿ ನೀಡಿ ವರದಿಯೊಂದನ್ನು ನೀಡಿದ್ದು, ಈ ಬಗ್ಗೆ ೨೦೧೩-೧೪ನೇ ಸಾಲಿನಲ್ಲಿ ಅನುದಾನದ ಕೊರತೆಯಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲವೆಂದು ನಿರಾಕರಿಸಿರುವುದು ಸರ್ಕಾರದ ಗಮನಲ್ಲಿದೆಯೇ ;

(ಆ) ಸದರಿ ಯೋಜನೆಯನ್ನು ೨೦೧೪-೧೫ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು) ?

## ಗ್ರಾಮ ಪಂಚಾಯತ್‌ನಿಂದ ಬಾಕಿ ವಿದ್ಯುತ್ ಬಿಲ್ಲುಗಳು

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೭ (೨೨೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮ ಪಂಚಾಯಿತಿಗಳಿಂದ ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಮನ್ನಾ ಮಾಡಲು ಸಂಬಂಧಿಸಿದಂತೆ ಪರಿಹಾರ ಹುಡುಕಲು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆಯೆ ;

(ಆ) ಸಮಿತಿ ರಚಿಸಲಾಗಿದ್ದಲ್ಲಿ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೆ ;

(ಇ) ಸಲ್ಲಿಸಿದ್ದಲ್ಲಿ, ವರದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು (ವಿವರ ನೀಡುವುದು) ?

## ಜೀತ ಪದ್ಧತಿ ನಿರ್ಮೂಲನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೧೬೮ (೨೨೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜೀತ ಪದ್ಧತಿಯನ್ನು ಹೋಗಲಾಡಿಸಲು ಸರಕಾರ ಹಾಕಿಕೊಂಡ ಯೋಜನೆಗಳು ಯಾವುವು ;

(ಆ) ಜೀತ ಪದ್ಧತಿಯ ಎಷ್ಟು ಪ್ರಕರಣಗಳು ಇದುವರೆಗೆ ಪತ್ತೆ ಹಚ್ಚಲಾಗಿದೆ ; (ಜಿಲ್ಲಾವಾರು, ಪ್ರಕರಣವಾರು ಮಾಹಿತಿಯನ್ನು ನೀಡುವುದು) ;

(ಇ) ಪತ್ತೆಯಾದ ಪ್ರಕರಣಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಜೀತ ಪದ್ಧತಿಯಿಂದ ವಿಮುಕ್ತಿಗೊಳಿಸಿದ ನಂತರ ಸರಕಾರ ಅವರುಗಳ ಪುನರ್ವಸತಿಗಾಗಿ ಯಾವ ಕ್ರಮ ಕೈಗೊಂಡಿದೆ ; (ಜಿಲ್ಲಾವಾರು, ಪ್ರಕರಣವಾರು ವಿವರಗಳನ್ನು ನೀಡುವುದು) ;

(ಉ) ಜೀತ ಪದ್ಧತಿಯಿಂದ ವಿಮುಕ್ತಿ ಹೊಂದಿದ ನಂತರವೂ ಪುನರ್ವಸತಿ ಕಾಣದೇ ಇರುವ ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದಲ್ಲಿ ಈ ಕುರಿತು ಸರಕಾರ ಕೈಗೊಂಡ ಕ್ರಮಗಳೇನು ?

## ೨೦೧೨-೨೦೧೩ನೇ ಸಾಲಿನಿಂದ ಸರ್ಕಾರದ ಯೋಜನೆಗಳನ್ನು ಜಾಹೀರಾತು ಮೂಲಕ ತಲುಪಿಸಲು ಹಣ ಖರ್ಚು ಮಾಡಿರುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೬೯ (೨೯೮) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೨-೧೩ನೇ ಸಾಲಿನಿಂದ ಸರ್ಕಾರದ ಯೋಜನೆಗಳನ್ನು ಜನರಿಗೆ ಮುಟ್ಟಿಸುವುದರ ಸಲುವಾಗಿ ಇಲ್ಲಿಯವರೆಗೂ ಜಾಹಿರಾತುಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದೆ ;

(ಆ) ಯಾವ ಯಾವ ವಾಹಿನಿಗಳ; ಪತ್ರಿಕೆಗಳ ಮೂಲಕ ಜಾಹಿರಾತನ್ನು ನೀಡಿದೆ; ಪಾವತಿಸಲಾದ ಅನುದಾನದ ವಿಧಾನ ತಿಳಿಸುವುದು ;

(ಇ) ಜಾಹಿರಾತುಗಳಿಂದ ಸರ್ಕಾರ ವರ್ಷಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತಿದೆ ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ವರ್ಷಕ್ಕೆ ಎಷ್ಟು ಹೊರೆ ಬೀಳುತ್ತದೆ ;

(ಈ) ಸರ್ಕಾರದ ಯೋಜನೆಗಳನ್ನು ಜಾಹಿರಾತುಗಳ ಬದಲಿಗೆ ಇಲಾಖೆಯ ಮುಖಾಂತರ ಜನರಿಗೆ ತಲುಪಿಸಲು ಸಾಧ್ಯವಿಲ್ಲವೆ ;

(ಉ) ಇಲಾಖೆಗಳ ಮುಖಾಂತರ ಸರ್ಕಾರದ ಯೋಜನೆಗಳನ್ನು ಜನರಿಗೆ ಮುಟ್ಟಿಸುವುದರಿಂದ ಸರ್ಕಾರ ವರ್ಷಕ್ಕೆ ಎಷ್ಟು ಹಣವನ್ನು ಉಳಿತಾಯ ಮಾಡಬಹುದು (ವಿವರ ನೀಡುವುದು) ?

## ಬೋಧಕೇತರ ಕಾರ್ಯಕ್ಕೆ ಶಿಕ್ಷಕರ ನಿಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೦ (೨೯೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಶಿಕ್ಷಕರನ್ನು, ಬೋಧಕೇತರ ಕಾರ್ಯಕ್ಕೆ ನಿಯೋಜಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ವಿವರಗಳನ್ನು ಜಿಲ್ಲಾವಾರು ನೀಡುವುದು ;

(ಇ) ಜಿಲ್ಲಾವಾರು ಶಿಕ್ಷಕರ ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು ;

(ಈ) ಶಿಕ್ಷಕರನ್ನು ಬೋಧಕೇತರ ಕಾರ್ಯಗಳಿಗೆ, ಬೇರೆ ಇಲಾಖೆಗಳಿಗೆ ನಿಯೋಜಿಸಿಕೊಂಡಿದ್ದಲ್ಲಿ ಇವರನ್ನು ಮರಳಿ ತಮ್ಮ ಕಾರ್ಯ ಸ್ಥಾನಗಳಿಗೆ ಹಿಂಪಡೆಯುವಲ್ಲಿ ಸರಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜೀವ್ ಗಾಂಧಿ ಚೈತನ್ಯ ಯೋಜನೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೧ (೨೯೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ ;

(ಆ) ಅನುಷ್ಠಾನಗೊಳಿಸಿದ್ದಲ್ಲಿ, ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿಗಳಿಂದ ಎಷ್ಟು ನಿರುದ್ಯೋಗಿ ಯುವಕ ಯುವತಿಯರನ್ನು ಗುರುತಿಸಲಾಗಿದೆ ; (ವಿವರಗಳನ್ನು ನೀಡುವುದು)

(ಇ) ಗುರುತಿಸಲಾದ ನಿರುದ್ಯೋಗಿಗಳಿಗೆ ಯಾವ ತರಹದ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ;

(ಈ) ಇಲ್ಲಿಯವರೆಗೂ ಸದರಿ ನಿರುದ್ಯೋಗಿಗಳಿಗೆ ನೀಡಲಾದ ತರಬೇತಿ ವಿವರಗಳನ್ನು ನೀಡುವುದು ;

(ಉ) ಇದಕ್ಕಾಗಿ ಇಲ್ಲಿಯವರೆಗೂ ಪ್ರತಿ ಗ್ರಾಮ ಪಂಚಾಯಿತಿಗೆ ನೀಡಲಾದ ಅನುದಾನವೆಷ್ಟು (ಈ ಯೋಜನೆಯ ಪ್ರಗತಿ ವಿವರ ನೀಡುವುದು) ?

## ಬಾಲಕಿಯ ಮೇಲೆ ನಡೆದ ದೌರ್ಜನ್ಯ

**ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು):-**

೧೭೨ (೨೯೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ದಿನಾಂಕ: ೦೪-೦೬-೨೦೧೪ರಂದು ರಾಮನಗರದಲ್ಲಿ ಮೌಲ್ವಿಯೊಬ್ಬರಿಂದ ಶಾಲಾ ಬಾಲಕಿಯೊಬ್ಬಳು ದೈಹಿಕ ಹಾಗೂ ಮಾನಸಿಕ ದೌರ್ಜನ್ಯಕ್ಕೆ ಒಳಗಾಗಿ ಮಂಡ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವಾಗ ; ಈ ಕುರಿತು ಬಾಲಕಿಯ ನೆರವಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

## ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿ ಬರಪರಿಹಾರ

**ಶ್ರೀ ಅಶ್ವಥ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೩ (೨೯೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನಲ್ಲಿ ಬರ ಪರಿಹಾರ ನಿಧಿಯಲ್ಲಿ ಯಾವ ಯಾವ ಕೆಲಸಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ;

(ಆ) ಕುಡಿಯುವ ನೀರಿಗಾಗಿ ಹೋಬಳಿವಾರು ಮತ್ತು ಪಂಚಾಯಿತಿವಾರು ಬಿಡುಗಡೆ ಮಾಡಿರುವ ಹಣವೆಷ್ಟು ;

(ಇ) ಕುಡಿಯುವ ನೀರಿಗಾಗಿ ಕೊರೆದಿರುವ ಬೋರ್‌ವೆಲ್‌ಗಳು ಎಷ್ಟು; (ಪಂಚಾಯಿತಿವಾರು ವಿವರ ನೀಡುವುದು) ;

(ಈ) ಮಾರ್ಕೋನಹಳ್ಳಿ ಡ್ಯಾಂನಿಂದ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಮತ್ತು ಇತರ ೧೦೬ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಬಹುಗ್ರಾಮ ಕುಡಿಯುವ ನೀರಿನಯೋಜನೆ (Multi Village Drinking Water Scheme) ಯಾವ ಹಂತದಲ್ಲಿದೆ ; ಕಾಮಗಾರಿ ಪ್ರಾರಂಭವಾಗಿರುವುದೇ ; ಹಾಗಿದ್ದಲ್ಲಿ, ಯಾವಾಗ ಪ್ರಾರಂಭವಾಗಿದೆ ; ಇಲ್ಲವಾದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ;

(ಉ) ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆ ಮಾಡಿರುವ ಹಣವೆಷ್ಟು; ಇದರಲ್ಲಿ ರಾಜ್ಯ ಸರ್ಕಾರದ ಹಣವೆಷ್ಟು ; ಯಾವಾಗ ಹಣ ಬಿಡುಗಡೆ ಮಾಡಲಾಗಿದೆ ; ಇದರಲ್ಲಿ ಕೇಂದ್ರ ಸರ್ಕಾರದ ಪಾಲೆಷ್ಟು ?

## ಶಾಲಾ ಮಕ್ಕಳ ಸಮವಸ್ತ್ರ ವಿತರಣೆ

**ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೧೭೪ (೨೩೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನಲ್ಲಿ ಶಾಲಾ ಮಕ್ಕಳ ಸಮವಸ್ತ್ರ ವಿತರಣೆಗಾಗಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಪಡೆಯುವ ಸಮವಸ್ತ್ರದ ಪ್ರಮಾಣ ಎಷ್ಟು ;

(ಆ) ಖಾಸಗಿಯವರಿಂದ ಪಡೆಯುವ ಸಮವಸ್ತ್ರದ ಪ್ರಮಾಣವೆಷ್ಟು ;

(ಇ) ಸಮವಸ್ತ್ರಗಳನ್ನು ಮುಂಗಡ ನೀಡಿ ಖರೀದಿಸಲಾಗಿದೆಯೇ ; ಖರೀದಿ ಮಾಡಿದರೆ, ಯಾರಿಗೆ ಎಷ್ಟು ಹಣ ನೀಡಿ ಖರೀದಿ ಮಾಡಲಾಗಿದೆ ;

(ಈ) ಕೆ.ಹೆಚ್.ಡಿ.ಸಿ. ಮುಂಗಡ ಹಣ ನೀಡಿಲ್ಲ ಎಂದು ಸಂಘದ ಅಧ್ಯಕ್ಷರು ಪ್ರಶ್ನಿಸಿದ್ದಾರೆ, ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

## ನಂದಿಬೆಟ್ಟ ಹಾಗೂ ದೇವರಾಯನ ದುರ್ಗ ಅಭಿವೃದ್ಧಿ

**ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೫ (೨೯೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಸನಿಹದಲ್ಲಿರುವ ನಂದಿಬೆಟ್ಟ ಹಾಗೂ ದೇವರಾಯನ ದುರ್ಗ ಸ್ಥಳಗಳನ್ನು ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಲು ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು ;

(ಆ) ನಂದಿಬೆಟ್ಟಕ್ಕೆ ದಿವಂಗತ ಚಿತ್ರನಟ ಶಂಕರ್‌ನಾಗ್‌ರವರು "ಹಗ್ಗದ ಟ್ರಾಲಿಕಾರ್" ("Trolly Car Cable") ಅಳವಡಿಸಿ ಪ್ರವಾಸೋದ್ಯಮ ಅಭಿವೃದ್ಧಿ ತಾಣವನ್ನಾಗಿಸಲು ಇದ್ದಂತಹ ಚಿಂತನೆ ಈಗ ಸರ್ಕಾರದ ಮುಂದಿದೆಯೇ ;

(ಇ) ಬೆಂಗಳೂರು ಪಕ್ಕದಲ್ಲೇ ಇರುವ ಸಾವನದುರ್ಗ, ದೇವರಾಯನ ದುರ್ಗ, ಶಿವಗಂಗೆ ಮತ್ತು ರಾಮನಗರದ ರಾಮದೇವರು ಬೆಟ್ಟಗಳನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಸರ್ಕಾರ ಯಾವುದಾದರೂ ಯೋಜನೆ ರೂಪಿಸಿರುವುದೇ ?

## ಬೆಂಗಳೂರು–ಮೈಸೂರು ರೈಲು ಜೋಡಿ ಮಾರ್ಗ

**ಶ್ರೀ ಅಶ್ವತ್ಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೬ (೨೪೦) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು–ಮೈಸೂರು ರೈಲು ಜೋಡಿ ಮಾರ್ಗ ಕಾಮಗಾರಿ ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು ;

(ಆ) ಪ್ರಾರಂಭಿಸಿದ್ದರೆ, ಅದು ಯಾವ ಹಂತದಲ್ಲಿದೆ ;

(ಇ) ಇದಕ್ಕೆ ಸರ್ಕಾರವು ಬಿಡುಗಡೆ ಹಾಗೂ ಖರ್ಚು ಮಾಡಿರುವ ಹಣವೆಷ್ಟು ;

(ಈ) ಸದರಿ ರೈಲು ಜೋಡಿ ಮಾರ್ಗ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು (ಪೂರ್ಣ ವಿವರಗಳನ್ನು ನೀಡುವುದು) ?

## ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳು

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೭ (೨೩೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳು ಹೆಚ್ಚಾಗಲು ಕಾರಣವೇನು ;

(ಆ) ರಾಜ್ಯದಲ್ಲಿ ಕಂಡುಬಂದಿರುವ ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳು ಎಷ್ಟು ; ಅವು ಯಾವುವು (ಜಿಲ್ಲಾವಾರು ವಿವರ ನೀಡುವುದು) ;

(ಇ) ಹೆಣ್ಣು ಮಕ್ಕಳ ಮಾರಾಟ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬಾಲ್ಯ ವಿವಾಹ ಪದ್ಧತಿ

**ಶ್ರೀಮತಿ ಭಾರತಿ ಶೆಟ್ಟಿ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೭೮ (೨೩೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಬಾಲ್ಯ ವಿವಾಹ ಪದ್ಧತಿ ಈಗಲೂ ಜಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಬಾಲ್ಯ ವಿವಾಹ ಪದ್ಧತಿ ಹೆಚ್ಚಾಗಿ ಚಾಲ್ತಿಯಲ್ಲಿದೆ ;

(ಆ) ಕಳೆದ ಮೂರು ವರ್ಷಗಳಿಂದ ಸರ್ಕಾರದ ಗಮನಕ್ಕೆ ಬಂದಿರುವ ಬಾಲ್ಯ ವಿವಾಹಗಳ ವಿವರ ನೀಡುವುದು (ಪ್ರಕರಣವಾರು ವಿವರ ನೀಡುವುದು) ;

(ಇ) ಸರ್ಕಾರದ ಗಮನಕ್ಕೆ ಬಂದಿರುವ ಪ್ರಕರಣಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಶುದ್ಧ ಕುಡಿಯುವ ನೀರು ಸರಬರಾಜು

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೧೭೯ (೨೩೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೩-೧೪ನೇ ಸಾಲಿನಲ್ಲಿ ರಾಷ್ಟ್ರೀಯ ಕುಡಿಯುವ ನೀರು ಯೋಜನೆಯಡಿ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆಯಲ್ಲಿ ಅನೇಕ ಜಿಲ್ಲೆಗಳ ಗ್ರಾಮಗಳಲ್ಲಿ ಕುಡಿಯುವ ನೀರಿನ ಗುಣಮಟ್ಟ ಕುಸಿದಿರುವುದು ಕಂಡುಬಂದಿದ್ದು, ಇವುಗಳಿಗೆ ಶುದ್ಧ ನೀರು ಒದಗಿಸಲು ಕೈಗೊಂಡಿರುವ ಕ್ರಮಗಳೇನು ;

(ಆ) ಹಾಸನ ನಗರದ ಮತ್ತು ಸುತ್ತಮುತ್ತಲಿನ ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆಯಿದ್ದು ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಹೇಮಾವತಿ ಮತ್ತು ಯಗಚಿ ಜಲಾಶಯಗಳಿಂದ ಹಾಸನ ನಗರ ಮತ್ತು ಜಿಲ್ಲೆಯ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗಿದೆಯೆ ;

(ಈ) ಯೋಜನೆ ರೂಪಿಸಿದ್ದಲ್ಲಿ, ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳೇನು ?

## ವಸತಿ ಯೋಜನೆಯಡಿ ನಿವೇಶನ ಹಂಚಿಕೆ ಪ್ರಕ್ರಿಯೆ

**ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೮೦ (೨೯೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಅಭಿವೃದ್ಧಿಪಡಿಸಿದ ಯೋಜನೆಯಡಿ ಹಂಪಾಪುರದಲ್ಲಿ ಹೌಸಿಂಗ್ ಬೋರ್ಡ್ ಮತ್ತು ಎಲ್ ಆ್ಯಂಡ್ ಸಿ ಸಿಲಿಕಾನ್ ಸಿಟಿ ಖಾಸಗೀ ಕಂಪನಿಯ ಜಂಟೀ ಸಹಭಾಗಿತ್ವದಲ್ಲಿ ನಿವೇಶನಗಳ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಹಂಚಿಕೆ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಆ) ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ; ಇದರಲ್ಲಿ ಕೆಹೆಚ್‌ಬಿಯ ಪಾಲಿನ ನಿವೇಶನಗಳ ಸಂಖ್ಯೆ ವಿವರಗಳನ್ನು ಹಾಗೂ ವಸತಿ ಬಡಾವಣೆಯ ನೀಲಿನಕಾಶೆಯ ಪ್ರತಿ ಒದಗಿಸುವುದು ;

(ಇ) ಈ ಪೈಕಿ ಎಲ್‌ಐಜಿಯ ನಿವೇಶನ ಸಂಖ್ಯೆ ೪೧೬ ರಿಂದ ೪೨೫ ರವರೆಗಿನ ನಿವೇಶನ ಹಂಚಿಕೆಯನ್ನು ಮಾಡದಿರುವುದು ನಿಜವೇ ; ಈ ಜಾಗವೇನಾದರೂ ವಿವಾದಲ್ಲಿದೆಯೇ ; ಇದಕ್ಕೆ ಕಾರಣಗಳೇನು ; ಇದರಿಂದ ನಕಾಶೆಯ ಪ್ಲಾನ್‌ನ್ನು ಬದಲಾವಣೆ ಮಾಡಲು ಉದ್ದೇಶಿಸಿದೆಯೇ ; ಯಾವಾಗ ಇಂತಹವರಿಗೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ ; ಇದಕ್ಕೆ ತೆಗೆದುಕೊಳ್ಳುವ ಸಮಯ ಎಷ್ಟು (ವಿವರಗಳನ್ನು ಒದಗಿಸುವುದು) ;

(ಈ) ಅದೇ ರೀತಿ ಬಿಡದಿ ವಂಡರ್‌ಲಾ ಸಮೀಪದ ಕಾಕರಾಮನಹಳ್ಳಿ, ಎಂ. ಕರೇನಹಳ್ಳಿ ಹಾಗೂ ಬೋರೇಹಳ್ಳಿ ವಸತಿ ಯೋಜನೆ ಹಂಚಿಕೆ ಯಾವ ಹಂತದಲ್ಲಿದೆ ; ಇದಕ್ಕಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆಯೇ ; (ಅರ್ಹರ ಪಟ್ಟಿ ವಿವರ ಒದಗಿಸುವುದು) ಯಾವಾಗ ಇವರಿಗೆ ಲಾಟರಿ ಮೂಲಕ ನಿವೇಶನ ಹಂಚಿಕೆ ಮಾಡಲಾಗುವುದು ;

(ಉ) ಅರ್ಹರಲ್ಲದ ಪಟ್ಟಿಯನ್ನು ಸಹ ಒದಗಿಸುವುದು ; ಲಾಟರಿ ಹಂಚಿಕೆ ಅನರ್ಹತೆಗೆ ಕಾರಣಗಳೇನು ?

## ಎಸ್.ಎಸ್.ಎಲ್.ಸಿ ಹಾಗೂ ಸಂಗೀತ ಪರೀಕ್ಷಾ ಪಠ್ಯಕ್ರಮ ಬದಲಾವಣೆ

**ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೧ (೨೮೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಎಸ್.ಎಸ್.ಎಲ್.ಸಿ ಪಠ್ಯಕ್ರಮವನ್ನು ಬದಲಾವಣೆ ಮಾಡಲಾಗಿದೆಯೇ ; ಇದಕ್ಕೆ ಕಾರಣಗಳೇನು ; ಅದೇ ರೀತಿ ಪರೀಕ್ಷಾ ಪದ್ಧತಿ ಬದಲಾವಣೆಗೂ ಸರ್ಕಾರ ಮುಂದಾಗಿದೆಯೇ ;

(ಆ) ವಾರ್ಷಿಕ ಪರೀಕ್ಷೆಯನ್ನು ಪಬ್ಲಿಕ್ ಮಾದರಿಯಲ್ಲಿ ಅಥವಾ ಶಾಲಾ ಹಂತದಲ್ಲೇ ಮಾಡಲು ಉದ್ದೇಶಿಸಿದೆಯೇ ; ಇದಕ್ಕೆ ನಿಗದಿಪಡಿಸಿರುವ ಅಂಕಗಳು, ಬಾಹ್ಯ ಆಂತರಿಕ ಅಂಕಗಳ ವಿವರಗಳನ್ನು ನೀಡುವುದು ; ಇದರಲ್ಲಿ ಬಿಟ್ಟಜಾಗ ತುಂಬುವ, ಹೊಂದಿಸಿ ಬರೆಯುವ ಹಾಗೂ ಮಲ್ಟಿಛಾಯ್ಸ್ ಆಪ್ಷನ್‌ನ ವಸ್ತುನಿಷ್ಟ ಮಾದರಿ ಪ್ರಶ್ನೆಗಳನ್ನು ಎಷ್ಟು ಅಂಕಕ್ಕೆ ಅಳವಡಿಸಿಕೊಳ್ಳಲಾಗಿದೆ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಇ) ಸೆಮಿಸ್ಟರ್ ಪದ್ಧತಿಯು ಆಚರಣೆಯಲ್ಲಿರುವುದೇ ಅಥವಾ ರದ್ದುಗೊಂಡಿದೆಯೇ ;

(ಈ) ಅದೇ ರೀತಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಇನ್ನಿತರ ಸಂಗೀತ ಪರೀಕ್ಷೆಗಳನ್ನು ಮಂಡಳಿಯು ನಡೆಸುವುದೇ ಅಥವಾ ರದ್ದುಪಡಿಸುವುದೇ ; ಇದಕ್ಕೆ ನಿಗದಿಪಡಿಸಿರುವ ಅಂಕ ಮೌಲ್ಯ ಮಾಪನ ಪ್ರಕ್ರಿಯೆಯ ವಿವರಗಳನ್ನು ಒದಗಿಸುವುದು ;

(ಉ) ವಾದ್ಯ ಸಂಗೀತದ (ಕೊಳಲು, ತಬಲ, ಇತ್ಯಾದಿ) ಪಠ್ಯಕ್ರಮಗಳೇನು ; ಪರೀಕ್ಷೆ ತೆಗೆದುಕೊಳ್ಳುವ ಮಾನದಂಡಗಳೇನು ; ಈ ಶೈಕ್ಷಣಿಕ ವರ್ಷ ಸದರಿ ಪರೀಕ್ಷೆಗಳನ್ನು ಯಾರು ನಿರ್ವಹಿಸುತ್ತಾರೆ ; ಮುಂದಿನ ಶೈಕ್ಷಣಿಕ ವರ್ಷದಿಂದ ಸಂಗೀತ ವಿ.ವಿ.ಗೆ ವರ್ಗಾಯಿಸಲಾಗುವುದೇ (ವಿವರ ನೀಡುವುದು ಹಾಗೂ ಪಠ್ಯಪುಸ್ತಕದ ಪ್ರತಿ ಒದಗಿಸುವುದು) ?

## ವೈಯುಕ್ತಿಕ ಶೌಚಾಲಯ ಯೋಜನೆ ಅನುಷ್ಠಾನದಲ್ಲಿ ವಿಳಂಬ

**ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೨ (೨೭೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಿರ್ಮಲ್ ಭಾರತ್ ಅಭಿಯಾನ ಯೋಜನೆಯಡಿ ಜಾರಿಗೊಳಿಸಿದ ವೈಯುಕ್ತಿಕ ಶೌಚಾಲಯ ಕಾರ್ಯಕ್ರಮ ಅನುಷ್ಠಾನದಲ್ಲಿ ಅನುಸರಿಸುವ ಮಾನದಂಡಗಳೇನು ; ಯೋಜನೆಯ ಪ್ರಗತಿ ವಿವರಗಳನ್ನು ಜಿಲ್ಲಾವಾರು ಒದಗಿಸುವುದು ಹಾಗೂ ಈ ಯೋಜನೆಯಡಿ ಲಭ್ಯವಾಗುವ ಸಹಾಯಧನ ಮೊತ್ತ ಎಷ್ಟು ; ಇದನ್ನು ಯಾವ ರೂಪದಲ್ಲಿ ಫಲಾನುಭವಿಗಳಿಗೆ ನೀಡಲಾಗುತ್ತದೆ ;

(ಆ) ಈ ಯೋಜನೆಯ ಹಣ ವಿತರಣೆಯಲ್ಲಿ ಲೋಪದೋಷಗಳು ಕಂಡುಬಂದಿರುವುದು ನಿಜವೇ ; ಇದರ ನಿವಾರಣೆಗೆ ಏಕೀಕೃತ ಹಂತ ಅಳವಡಿಸಲು ಯಾವ ಕ್ರಮ ಕೈಗೊಂಡಿದೆ ;

(ಇ) ವೈಯಕ್ತಿಕ ಫಲಾನುಭವಿಗೆ ಹಣ ನೀಡುವಲ್ಲಿ ಅನೇಕ ಅನಗತ್ಯ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು) ;

(ಈ) ಇದರಿಂದಾಗಿ ಯೋಜನೆ ವಿಫಲವಾಗುವ ಹಾಗೂ ಫಲಾನುಭವಿಗಳು ಉತ್ಸಾಹ ತೋರದ ವಾತಾವರಣ ನಿರ್ಮಾಣವಾಗಿರುವುದು ಕಂಡುಬಂದಿದೆಯೇ ;

(ಉ) ಹಾಗಿದ್ದಲ್ಲಿ, ನೇರವಾಗಿ ಫಲಾನುಭವಿಗಳಿಗೆ ಹಣ ಪಾವತಿ ಮಾಡಲು ಇರುವ ತೊಂದರೆಗಳೇನು ; ಈ ಬಗ್ಗೆ ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ (ವಿವರ ನೀಡುವುದು) ?

## ಕುಡಿಯುವ ನೀರಿನ ಕೊರತೆ ನೀಗಿಸಲು ವಿಶೇಷ ಕೋರಿಕೆ

**ಶ್ರೀ ಕೆ. ಮೋನಪ್ಪ ಭಂಡಾರಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩ (೨೯೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮೀಣ ಭಾಗದಲ್ಲಿ ಇತ್ತೀಚಿನ ಬೇಸಿಗೆ ಅಭಾವದಿಂದಾಗಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಎಲ್ಲೆಲ್ಲಿ ಈ ರೀತಿಯ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ಕಂಡು ಬಂದಿತ್ತು ; (ಜಿಲ್ಲಾವಾರು, ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು) ;

(ಇ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಯಾವ ರೀತಿಯ ತುರ್ತು ಕಾಮಗಾರಿಗಳನ್ನು ಕೈಗೊಂಡಿತ್ತು ; ಇದಕ್ಕಾಗಿ ಸರ್ಕಾರ ನೀಡಿರುವ ಅನುದಾನ ಮೊತ್ತವೆಷ್ಟು ;

(ಈ) ಇಂತಹ ತುರ್ತು ಕಾಮಗಾರಿ ಅನುಷ್ಠಾನಕ್ಕೆ ಎಷ್ಟು ಮೊತ್ತ ಅನುದಾನ ನೀಡಿದೆ ; ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ಹಾಗೂ ಕಳೆದ ವರ್ಷದ ಖರ್ಚಾಗದ ಉಳಿದ ಮೊತ್ತವನ್ನು ಬಳಕೆ ಮಾಡಿಕೊಳ್ಳಲಾಗುವುದೇ ;

(ಉ) ಇದಕ್ಕಾಗಿ ಗ್ರಾಮೀಣಾಭಿವೃದ್ಧಿ ವ್ಯಾಪ್ತಿಯ ಅಧಿಕಾರಿ ನೌಕರರಿಗೆ ರಜೆ ನೀಡದಿರಲು ಸರ್ಕಾರ ನಿರ್ಧರಿಸಿದೆಯೇ ;

(ಊ) ತಾತ್ಕಾಲಿಕ ಪರಿಹಾರವಾಗಿ ರಾಜ್ಯದ ಎಷ್ಟು ಜಿಲ್ಲೆಗಳ, ಎಷ್ಟು ಗ್ರಾಮಗಳಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಪ್ರಕ್ರಿಯೆ ನಡೆದಿದೆ (ಜಿಲ್ಲಾವಾರು ವಿವರ ನೀಡುವುದು) ; ಇದಕ್ಕೆ ಖರ್ಚಾದ ಮೊತ್ತವೆಷ್ಟು ?

## ಬೆಂಗಳೂರು ಮಹಾನಗರದಲ್ಲಿ ಸ್ಥಳೀಯ ರೈಲು (Local Train) ಸೌಲಭ್ಯ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೮೪ (೨೪೫) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನಿಂದ ನೆಲಮಂಗಲಕ್ಕೆ ರೈಲು ಸಂಚಾರ ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ; ಈ ಬಗ್ಗೆ ಕೇಂದ್ರ ಸರ್ಕಾರ ರೈಲ್ವೆ ಸಚಿವರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಗುವುದೇ ;

(ಆ) ನೆಲಮಂಗಲದಿಂದ–ಬೆಂಗಳೂರು–ಯಲಹಂಕ, ನೆಲಮಂಗಲ ದಿಂದ ಬೆಂಗಳೂರು–ಕೆ.ಆರ್.ಪುರಂಗಳಿಗೆ ಸ್ಥಳೀಯ ರೈಲನ್ನು ಓಡಿಸುವ ಬಗ್ಗೆ ಕೇಂದ್ರ ರೈಲ್ವೆ ಸಚಿವರಿಗೆ ಮನವಿ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ನೆಲಮಂಗಲದಿಂದ ಕೆಂಗೇರಿ ರೈಲ್ವೆ ಮಾರ್ಗ ರಚನೆಯ ಪ್ರಸ್ತಾವನೆಯನ್ನು ಸಲ್ಲಿಸಿ ಈ ಮಾರ್ಗದ ರಚನೆಗೆ ಕ್ರಮ ತೆಗೆದುಕೊಳ್ಳಲಾಗುವುದೇ ; ಅದೇ ರೀತಿ ಈಗಾಗಲೇ ಮಂಜೂರಾಗಿರುವ ಬೆಂಗಳೂರು–ಚಾಮರಾಜನಗರ ರೈಲ್ವೆ ಮಾರ್ಗದಲ್ಲಿ ಮೊದಲ ಹಂತವಾಗಿ ಕೆಂಗೇರಿ–ಹಾರೋಹಳ್ಳಿ ರೈಲ್ವೆ ಮಾರ್ಗವನ್ನು ಆದಷ್ಟು ಬೇಗ ನಿರ್ಮಿಸಲು ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ರೈಲ್ವೆ ಸಚಿವರಿಗೆ ಮನವಿ ಮಾಡಲಾಗುವುದೇ ;

(ಈ) ಈ ಮಾರ್ಗಗಳ ರಚನೆ ಮತ್ತು ಈ ಮಾರ್ಗಗಳಲ್ಲಿ ರೈಲ್ವೆಗಾಡಿಗಳ ಕಾರ್ಯಾಚರಣೆಯಿಂದ ಬೆಂಗಳೂರು ನಗರದ ಮೇಲಿನ ಸಾರಿಗೆ ಒತ್ತಡ ಕಡಿಮೆಯಾಗಿ ಜನರಿಗೆ ಅನುಕೂಲ ಆಗುವುದಿಲ್ಲವೇ ; ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಟೆಲಿಕಮ್ಯೂನಿಕೇಷನ್ ಗೋಪುರಗಳು

**ಶ್ರೀ•ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೮೫ (೨೪೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಟೆಲಿಕಮ್ಯೂನಿಕೇಷನ್ ಗೋಪುರಗಳ ನಿರ್ಮಾಣಕ್ಕೆ ಸ್ಥಳೀಯಾಡಳಿತ ಸಂಸ್ಥೆಗಳಿಂದ ಪರವಾನಿಗೆ ಪಡೆಯದೇ ಪಂಚಾಯತ್‌ರಾಜ್ ಹಕ್ಕಿಗೆ ಧಕ್ಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಿರ್ಮಾಣವಾಗಿರುವ ಟೆಲೆಕಮ್ಯೂನಿಕೇಷನ್ ಗೋಪುರಗಳಿಂದ ಸೂಕ್ತ ತೆರಿಗೆ ಸಂಗ್ರಹಿಸುವಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪಂಚಾಯತ್ ಆಡಳಿತದಿಂದ ಅನುಮತಿ ಪಡೆದು ಟೆಲಿ ಕಮ್ಯೂನಿಕೇಷನ್ ಗೋಪುರಗಳ ನಿರ್ಮಾಣ ಮಾಡುವಲ್ಲಿ ಸರ್ಕಾರದ ನಿಲುವು, ಪಾತ್ರವೇನು (ವಿವರ ನೀಡುವುದು) ;

(ಈ) ನಿರ್ಮಾಣಗೊಂಡಿರುವ ಟೆಲಿಕಮ್ಯೂನಿಕೇಷನ್ ಗೋಪುರಗಳಿಂದ ಸೂಕ್ತ ತೆರಿಗೆ ಸಂಗ್ರಹಿಸುವ ಬಗ್ಗೆ ಗ್ರಾಮ ಪಂಚಾಯತ್‌ಗಳಿಗೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು) ?

## ಹಳ್ಳಿಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಕಾಮಗಾರಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):–**

೧೮೬ (೨೪೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :--

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಯಾವ ಯಾವ ತಾಲ್ಲೂಕಿನ ಯಾವ ಯಾವ ಹಳ್ಳಿಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಇದಕ್ಕೆ ಮಂಜೂರಾಗಿರುವ ಹಣ ಎಷ್ಟು ; ಖರ್ಚಾಗಿರುವ ಹಣ ಎಷ್ಟು (ವಿವರಗಳನ್ನು ಒದಗಿಸುವುದು)

(ಆ) ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಮುಕ್ತಾಯವಾಗಿರುವ ಕಾಮಗಾರಿಗಳು ಯಾವುವು ; ಪ್ರಗತಿಯ ಹಂತದಲ್ಲಿರುವ ಕಾಮಗಾರಿಗಳು ಯಾವುವು ; ಇನ್ನೂ ಕೈಗೊಳ್ಳಬೇಕಾಗಿರುವ ಕಾಮಗಾರಿಗಳು ಯಾವುವು (ಗ್ರಾಮವಾರು ವಿವರಗಳನ್ನು ಒದಗಿಸುವುದು) ?

## ಕರ್ನಾಟಕ ಗೃಹ ಮಂಡಳಿಯಿಂದ ಮನೆ/ನಿವೇಶನಗಳ ನಿರ್ಮಾಣ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):-**

೧೮೭ (೨೪೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವತಿಯಿಂದ ಮನೆ ನಿವೇಶನಗಳನ್ನು ನಿರ್ಮಿಸಲು ಬೆಂಗಳೂರು ಉತ್ತರ ತಾಲ್ಲೂಕು ಹೆಸರುಘಟ್ಟ ಹೋಬಳಿಯ ಹಳ್ಳಿಗಳಲ್ಲಿ ಭೂಸ್ವಾಧೀನ ಕಾರ್ಯ ಕೈಗೊಳ್ಳಲಾಗಿದೆಯೇ ; ಯಾವ ಯಾವ ಹಳ್ಳಿಗಳಲ್ಲಿ ಎಷ್ಟೆಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ (ವಿವರ ನೀಡುವುದು) ;

(ಆ) ಈ ಪ್ರದೇಶದಲ್ಲಿ ಎಷ್ಟು ಮನೆಗಳನ್ನು, ನಿವೇಶನಗಳನ್ನು, ವಸತಿ ಸಂಕೀರ್ಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ; ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಿ, ಕಾರ್ಯ ಗತಗೊಳಿಸಲಾಗುವುದು (ವಿವರಗಳನ್ನು ನೀಡುವುದು) ?

## ಶೌಚಾಲಯದ ಅವ್ಯವಸ್ಥೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು):-**

೧೮೮ (೨೪೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೂಲಭೂತ ಸೌಲಭ್ಯಗಳಲ್ಲಿ ಒಂದಾದ ಶೌಚಾಲಯ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಜಿಲ್ಲೆಯಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ ; ಎಷ್ಟು ಶೌಚಾಲಯಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ ; ಬಾಕಿ

ನಿರ್ಮಿಸಬೇಕಾಗಿರುವ ಶೌಚಾಲಯಗಳೆಷ್ಟು ; (ಹೋಬಳಿವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಶೌಚಾಲಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ; ಬಾಕಿ ಇರುವ ಅನುದಾನವೆಷ್ಟು ?

## ನಂದಗಡ ಹಾಗೂ ಸಂಗೊಳ್ಳಿ ಗ್ರಾಮಗಳ ಅಭಿವೃದ್ಧಿಗೆ ಸಮಗ್ರ ಯೋಜನೆ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತದಿಂದ ಚುನಾಯಿತರಾದವರು) :–**

೧೮೯ (೨೬೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾಂತ್ರಿವೀರ ಸಂಗೊಳ್ಳಿ ರಾಯಣ್ಣನ ಹುಟ್ಟೂರಾದ ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಹಾಗೂ ಅವನ ಕಾರ್ಯಕ್ಷೇತ್ರವಾದ ಖಾನಾಪೂರ ತಾಲ್ಲೂಕಿನ ನಂದಗಡವನ್ನು ಸಮಗ್ರ ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

(ಆ) ಯಾವ ಪ್ರಕಾರವಾಗಿ ಬೇರೆ-ಬೇರೆ ಇಲಾಖೆಗಳ ಸಹಾಯದಿಂದ ಅಭಿವೃದ್ಧಿ ಮಾಡಲಾಗುವುದು ಹಾಗೂ ಇದರ ಕ್ರಿಯಾ ಯೋಜನೆ ಮಾಡಲಾಗಿದೆ (ವಿವರಗಳನ್ನು ಒದಗಿಸುವುದು) ;

(ಇ) ಸಂಗೊಳ್ಳಿ ರಾಯಣ್ಣನ ಕುರಿತು ಗ್ರಂಥ ಹೊರತರುವುದು, ಸಂಶೋಧನೆ ನಡೆಸುವುದು ಹಾಗೂ ವಿದ್ಯಾರ್ಥಿಗಳಿಗೆ ಫೇಲೋಶಿಪ್

ನೀಡುವುದು ಹಾಗೂ ರಾಯಣ್ಣನ ವಿಷಯವಾಗಿ ಪಿ.ಎಚ್.ಡಿ. ಮಾಡುವವರಿಗೆ ಸರ್ಕಾರದಿಂದ ಸಹಾಯ ಮಾಡಲಾಗುವುದೇ ; ಹಾಗೂ ಯಾವ ಪ್ರಕಾರವಾಗಿ ಸಹಾಯ ಮಾಡಲಾಗುವುದು ;

(ಈ) ಬೆಳಗಾವಿ ರೈಲ್ವೆ ನಿಲ್ದಾಣಕ್ಕೆ ಸಂಗೊಳ್ಳಿ ರಾಯಣ್ಣನ ಹೆಸರು ಇಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದೇ ; ಹಾಗೂ ಬೆಳಗಾವಿ ಬಸ್ ನಿಲ್ದಾಣಕ್ಕೆ ರಾಯಣ್ಣನ ಹೆಸರು ಇಡಲು ಕ್ರಮ ಕೈಗೊಳ್ಳಲಾಗುವುದೇ ;

(ಉ) ಸಂಗೊಳ್ಳಿ ರಾಯಣ್ಣನನ್ನು ನೇಣಿಗೆ ಹಾಕಿದ ಸ್ಥಳದಲ್ಲಿ ಅಂತರಾಷ್ಟ್ರೀಯ ಮಟ್ಟದ ಕುಸ್ತಿ ಶಾಲೆಯನ್ನು ಪ್ರಾರಂಭಿಸಲಾಗುವುದೇ ; ಹಾಗೂ ಸಂಗೊಳ್ಳಿಯಲ್ಲಿ ರಾಕ್ ಗಾರ್ಡನ್ ಮತ್ತು ಪ್ರಾಣಿ ಸಂಗ್ರಹಾಲಯ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಊ) ಕೇಂದ್ರ ಸರ್ಕಾರದಿಂದ ಸಹಾಯ ಪಡೆಯಲು ಅಭಿವೃದ್ಧಿ ಕ್ರಮ ಕೈಗೊಳ್ಳಲು ಕ್ರಿಯಾ ಯೋಜನೆ ರೂಪಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಆದೇಶ ಮಾಡಲಾಗುವುದೇ ?

## ಐ.ಐ.ಟಿ. ಕಾಲೇಜು ಪ್ರಾರಂಭ

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತದಿಂದ ಚುನಾಯಿತರಾದವರು) :-**

೧೯೦ (೨೫೨) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಐ.ಐ.ಟಿ. (Indian Institute of Technology) ಕಾಲೇಜು ಇಲ್ಲದೆ ಇರುವ ಸಂಗತಿ ನಿಜವೇ ;

(ಆ) ಹಾಗಿದ್ದಲ್ಲಿ, ಬೆಳಗಾವಿಯಲ್ಲಿ ಐ.ಐ.ಟಿ.(Indian Institute of Technology) ಕಾಲೇಜು ಪ್ರಾರಂಭಿಸಲು ಎಲ್ಲಾ ಮೂಲಭೂತ

ಸೌಕರ್ಯಗಳು ಇರುವುದರಿಂದ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಾಲಯದ ಮೇಲೆ ಒತ್ತಡ ತಂದು ಕಾಲೇಜು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ;

(ಇ) ಈ ಹಿಂದೆ ಕೇಂದ್ರ ಸರ್ಕಾರವು ಉತ್ತರ ಕರ್ನಾಟಕದಲ್ಲಿ ಐ.ಐ.ಟಿ. ಕಾಲೇಜು ಪ್ರಾರಂಭಿಸುವುದಾಗಿ ಆಶ್ವಾಸನೆ ನೀಡಿ, ಅದರ ಬಗ್ಗೆ ಅಗತ್ಯವಿರುವ ಸೌಕರ್ಯ ಒದಗಿಸಲು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದು, ಅದನ್ನು ಉಲ್ಲೇಖಿಸಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ನೆನಪಿನ ಪತ್ರ ಬರೆಯಲಾಗುವುದೇ ?

## ಕೊಳವೆ ಬಾವಿ ಕೊರೆಸಬಾರದೆನ್ನುವ ಆದೇಶ ಹಿಂಪಡೆಯುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)** :-

೧೯೧ (೨೬೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರು ತಮ್ಮ ಜಮೀನುಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಯಿಸಬಾರದೆನ್ನುವ ಸರ್ಕಾರದ ಆದೇಶ ಹೊರಡಿಸಿದ್ದು, ಬೈಲಹೊಂಗಲ, ಸವದತ್ತಿ ಹಾಗೂ ರಾಮದುರ್ಗ ತಾಲ್ಲೂಕಿನ ರೈತರು ಸಂಕಷ್ಟದಲ್ಲಿ ಸಿಲುಕಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೈತರು ಬೇಸಿಗೆ ಕಾಲದಲ್ಲಿ ಇದ್ದ ಬೆಳೆಗಳನ್ನು ಮತ್ತು ದನಕರುಗಳನ್ನು ರಕ್ಷಿಸಲು ಕುಡಿಯುವ ನೀರಿಗಾಗಿ ಹೊಲದಲ್ಲಿ ಮನೆ ಇದ್ದ ರೈತರು ಕೊಳವೆ ಬಾವಿ ತೋಡಿಸಬಾರದು ಎಂಬ ನಿರ್ಬಂಧದಿಂದ ರೈತರಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈಗಾಗಲೇ ಕೆಲವು ಜನರು ಸಾಲ–ಸೋಲ ಮಾಡಿ ಕೊಳವೆ ಬಾವಿಗಳನ್ನು ತೋಡಿಸಿದ್ದು, ಅವರಿಗೆ ಕೆ.ಇ.ಬಿ.ಯವರು ವಿದ್ಯುತ್ ಸಂಪರ್ಕ ಕೊಡದೇ ಇದ್ದ ಸಂಗತಿ ನಿಜವೇ ; ಈಗಾಗಲೇ ಕೊಳವೆ ಬಾವಿ ತೋಡಿಸಿದ ರೈತರಿಗೆ ವಿದ್ಯುತ್ ಒದಗಿಸಲು ಆದೇಶಿಸಲಾಗುವುದೇ ;

(ಈ) ಗಂಗಾ ಕಲ್ಯಾಣ, ದೇವರಾಜ ಅರಸು, ಶಾಸಕರ ಅನುದಾನ, ವಿಧಾನ ಪರಿಷತ್ ಸದಸ್ಯರ ಅನುದಾನದಡಿ ಕೊಳವೆಬಾವಿ ಕೊರೆಯಲು ಅಭ್ಯಂತರ ಇರುವುದಿಲ್ಲವೆಂಬ ಸಂಗತಿ ನಿಜವೇ ;

(ಉ) ಸಾಮಾನ್ಯ ಬಡ ರೈತ ಹಾಗೂ ಸಣ್ಣ ಹಿಡುವಳಿದಾರಿಗೆ ಒಂದು ನ್ಯಾಯ ಹಾಗೂ ಸರ್ಕಾರದ ಸಹಾಯ ಪಡೆಯುವ ಅಹಿಂದಾದವರಿಗೆ ಹಾಗೂ ಹಿಂದುಳಿದ ರೈತರಿಗೆ ಒಂದು ನ್ಯಾಯ ಇದು ಸರ್ಕಾರದ ದ್ವಂದ್ವ ನೀತಿಯಲ್ಲವೇ ;

(ಊ) ಎಲ್ಲ ರೈತರನ್ನು ಸಮವಾಗಿ ಕಾಣುವ ಉದ್ದೇಶದಿಂದ ಕೂಡಲೇ ಕೊಳವೆ ಬಾವಿ ತೋಡಿಸಬಾರದು ಎಂದು ಹೊರಡಿಸಿದ ಆದೇಶವನ್ನು ಹಿಂದಕ್ಕೆ ಪಡೆಯಲಾಗುವುದೇ ?

## ಗ್ರಾಮೀಣ ರಸ್ತೆಗಳ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)** :–

೧೯೨ (೨೮೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸುಮಾರು ಹತ್ತು ಸಾವಿರ ಕಿ.ಮೀ. ರಸ್ತೆ ನಿರ್ಮಿಸಲು ಜಪಾನ್ ದೇಶದ ಕೋ–ಆಪರೇಶನ್ ಏಜೆನ್ಸಿಗೆ ಸಲ್ಲಿಸಲಾಗಿರುವ ಪ್ರಸ್ತಾವನೆಗೆ ಕೇಂದ್ರದ ಗ್ರಾಮೀಣಾಭಿವೃದ್ಧಿ ಇಲಾಖೆ ಒಪ್ಪಿಗೆ ನೀಡಿರುವುದೇ ;

(ಆ) ಈಗ ಈ ಕೆಲಸ ಯಾವ ಹಂತದಲ್ಲಿರುತ್ತದೆ ; ಈ ಕಾಮಗಾರಿಗೆ ಎಷ್ಟು ಅನುದಾನದ ಅವಶ್ಯಕತೆಯಿದೆ ;

(ಇ) ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು; ಹಾಗೂ ಕೇಂದ್ರ ಸರ್ಕಾರದ ಪಾಲು ಎಷ್ಟು ;

(ಈ) ಈ ಯೋಜನೆಯ ವ್ಯಾಪ್ತಿಗೆ ಯಾವ ಯಾವ ಜಿಲ್ಲೆಗಳು ಎಷ್ಟೆಷ್ಟು ಕಿಲೋಮೀಟರ್ ರಸ್ತೆಗಳು ಒಳಪಡುತ್ತವೆ (ಜಿಲ್ಲಾವಾರು ಕಿಲೋಮೀಟರ್‌ವಾರು ವಿವರ ನೀಡುವುದು) ;

(ಉ) ಬೆಳಗಾವಿ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಎಷ್ಟು ಕಿ.ಮೀ. ರಸ್ತೆ ಹಾಗೂ ಬೆಳಗಾವಿ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಎಷ್ಟು ಕಿ.ಮೀ. ರಸ್ತೆ ಈ ಯೋಜನೆಯಿಂದ ಆಗುವುದು ?

## ಸಾಂಸ್ಕೃತಿಕ ಭವನ ನಿರ್ಮಾಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)** :–

೧೯೩ (೨೬೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರು ತಮ್ಮ ಸ್ವ ಅಕ್ಷರದಿಂದ ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಹಿರೇಕೊಪ್ಪ ಕೆ.ಎಸ್ ಹಾಗೂ ಕಿಲ್ಲಾ ತೊರಗಲ್ ಊರಲ್ಲಿ ಸಾರ್ವಜನಿಕ ಸ್ಥಳದಲ್ಲಿ ಸಾಂಸ್ಕೃತಿಕ ಭವನ ಕಟ್ಟಲು ಮತ್ತು ಪ್ರತಿಯೊಂದು ಭವನಕ್ಕೆ ಹತ್ತು ಲಕ್ಷ ರೂ.ಗಳಂತೆ ಹಣ ಬಿಡುಗಡೆ ಮಾಡಲು ಆದೇಶ ನೀಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾನ್ಯ ಸಚಿವರ ಆದೇಶದ ಪ್ರಕಾರ ಸಾಂಸ್ಕೃತಿಕ ಭವನ ಕಟ್ಟಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿ ಇವರಿಗೆ ಅಂದಾಜು ವೆಚ್ಚ ಪತ್ರಿಕೆ ತಯಾರಿಸಿ ಕಳುಹಿಸಲು ಆದೇಶ ನೀಡಿದ ಸಂಗತಿ ನಿಜವೇ ;

(ಇ) ನಿರ್ದೇಶಕರ ಆದೇಶದ ಪ್ರಕಾರ ಉಪ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿ ಇವರು ಸ್ಥಳ ಪರಿಶೀಲನೆ ಮಾಡಿ, ಎಲ್ಲ ಕಾಗದ ಪತ್ರಗಳೊಂದಿಗೆ ಕರ್ನಾಟಕ ಭೂಸೇನಾ ನಿಗಮ (ಕೆಆರ್‌ಐಡಿಬಿ) ಬೆಳಗಾವಿ ಇವರು ತಯಾರಿಸಿದ ಅಂದಾಜು ವೆಚ್ಚ ಪತ್ರಿಕೆಗಳನ್ನು ವಿಧಾನ ಪರಿಷತ್ತಿನ ಸದಸ್ಯರ ಪತ್ರದ ಸಂಗಡ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರಿಗೆ ಕಳುಹಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಮಾನ್ಯ ಸಚಿವರ ಆದೇಶದ ಪ್ರಕಾರ ಕೂಡಲೇ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಹಣ ಬಿಡುಗಡೆ ಮಾಡಿ, ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ ?

## ಪಂಚಾಯ್ತಿಗೊಂದು ಕುಡಿಯುವ ನೀರಿನ ಘಟಕ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು)** :-

೧೯೪೪ (೨೫೪೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗ್ರಾಮಪಂಚಾಯ್ತಿಗೊಂದು ಕುಡಿಯುವ ನೀರಿನ ಘಟಕ ಸ್ಥಾಪನೆ ವಿಚಾರ ಸರ್ಕಾರದ ಗಮನದಲ್ಲಿದೆಯೇ ; ಇದಕ್ಕಾಗಿ ಸರ್ಕಾರ ಎಷ್ಟು ಹಣ ನಿಗದಿಪಡಿಸಿದೆ ; ಎಷ್ಟು ಘಟಕಗಳನ್ನು ಸ್ಥಾಪಿಸಲಾಗುವುದು ; ಎಲ್ಲೆಲ್ಲಿ ಸ್ಥಾಪಿಸಲು ಸ್ಥಳ ಗುರುತಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಬಹುತೇಕ ಜಿಲ್ಲೆಗಳಲ್ಲಿ ಲಭ್ಯವಿರುವ ಕುಡಿಯುವ ನೀರು ಶುದ್ಧವಾಗಿಲ್ಲದಿರುವುದು ನಿಜವೇ ; ಪ್ಲೋರೈಡ್ ಆರ್ಸೆನಿಕ್ ಮುಂತಾದ ರಾಸಾಯನಿಕಗಳಿಂದ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಪ್ರಯೋಗಿಕವಾಗಿ ಪರೀಕ್ಷೆ ಮಾಡಲಾಗಿದೆಯೇ ;

(ಇ) ಕುಡಿಯುವ ನೀರು ಶುದ್ಧೀಕರಣ ಘಟಕ ಸ್ಥಾಪಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ ; ಖಾಸಗೀ ಹಾಗೂ ಸರ್ಕಾರೇತರ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ನೀರಿನ ಸದ್ಬಳಕೆ ಮತ್ತು ನೈರ್ಮಲ್ಯದ ಕುರಿತು ಜಾಗೃತಿ ಮೂಡಿಸಲಾಗುವುದೇ ;

(ಈ) ಸದರಿ ಎಷ್ಟು ಘಟಕಗಳನ್ನು ಸ್ಥಾಪಿಸಲಾಗಿದೆ ; ಯಾವ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ (ವಿವರ ನೀಡುವುದು) ;

(ಉ) ಶುದ್ಧ ಕುಡಿಯುವ ನೀರಿನ ಯೋಜನೆಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು) ; ಇದಕ್ಕಾಗಿ ಒದಗಿಸಿರುವ ಆರ್ಥಿಕ ನೆರವೆಷ್ಟು ?

## ರಾಜ್ಯದ ಪ್ರವಾಸೋದ್ಯಮಕ್ಕೆ ಮೂಲಭೂತ ಸೌಕರ್ಯಗಳು

**ಶ್ರೀ ಎ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೧೯೫ (೨೫೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಒಟ್ಟು ಇರುವ ಪ್ರವಾಸೋದ್ಯಮ ಸ್ಥಳಗಳೆಷ್ಟು ; ಅವುಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಮೂಲ ಸೌಕರ್ಯಗಳನ್ನು ಒದಗಿಸಲಾಗಿಯೇ (ವಿವರ ನೀಡುವುದು) ; ಸಿಬ್ಬಂದಿವರ್ಗ ಸಮರ್ಪಕವಾಗಿದೆಯೇ ;

(ಆ) ಕಳೆದೊಂದು ವರ್ಷದಲ್ಲಿ ರಾಜ್ಯದಲ್ಲಿ ಸಂದರ್ಶಿಸಿದ ಪ್ರವಾಸಿಗರ ಸಂಖ್ಯೆ ಎಷ್ಟು ; ಹೊರ ರಾಜ್ಯದಿಂದ ಬಂದವರೆಷ್ಟು ; ವಿದೇಶದಿಂದ ಆಗಮಿಸಿದವರೆಷ್ಟು ;

(ಇ) ಪ್ರವಾಸಿ ಸ್ಥಳಗಳಿಂದ ಸರ್ಕಾರಕ್ಕೆ ಬಂದ ಆದಾಯದ ಮೊತ್ತವೆಷ್ಟು ; ಹಾಗೂ ಎಷ್ಟು ಹೊಸ ಪ್ರವಾಸಿ ತಾಣಗಳನ್ನು ನಿರ್ಮಿಸಲಾಗಿದೆ ;

(ಈ) ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರದಿಂದ ಎಷ್ಟು ಅನುದಾನ ಮೀಸಲಿರಿಸಿದೆ ; ಎಷ್ಟು ಬಳಕೆಯಾಗಿದೆ ;

(ಉ) ಪ್ರವಾಸಿ ತಾಣಗಳ ಕುರಿತು ವಿದೇಶಿಗರ ಗಮನ ಸೆಳೆಯಲಾಗಿದೆಯೇ (ಇವರ ಸುರಕ್ಷತೆಗೆ ಕೈಗೊಂಡ ಕ್ರಮಗಳನ್ನು ವಿವರಗಳೊಂದಿಗೆ ತಿಳಿಸುವುದು) ?

## ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೯೬ (೨೫೫೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಇರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ವಹಿಸಿಕೊಡಲಾಗಿದೆಯೇ ; ಹಾಗಾದರೆ ಎಷ್ಟು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ವಹಿಸಿಕೊಡಲಾಗಿದೆ ; ಎಂದಿನಿಂದ ವಹಿಸಿಕೊಡಲಾಗಿದೆ (ಪೂರ್ಣ ವಿವರ ನೀಡುವುದು) ;

(ಇ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ ; ಹಾಗಾದರೆ ಯಾವ ಯಾವ ವರ್ಗದ ಎಷ್ಟು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಯಾವಾಗ ಅನುಮತಿ ನೀಡಿದೆ (ಪೂರ್ಣ ವಿವರ ನೀಡುವುದು) ;

(ಈ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಆಡಳಿತ ವ್ಯಾಪ್ತಿಗೆ ಇಂಜಿನಿಯರಿಂಗ್ ಕಾಲೇಜುಗಳನ್ನು ವಹಿಸಿಕೊಟ್ಟ ನಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಏಕಕಾಲದಲ್ಲಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ತಮ್ಮ ಸೇವೆಯನ್ನು ಯಾವ ಆಡಳಿತ ವ್ಯವಸ್ಥೆಯಲ್ಲಿ ಮುಂದುವರಿಸಲು ಇಚ್ಛಿಸುತ್ತೀರಿ ಎಂಬ ಬಗ್ಗೆ ನಿರ್ಧರಿಸಲು ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆಯೇ ?

## ಅನುದಾನಿತ ಪ್ರಥಮದರ್ಜೆ ಕಾಲೇಜುಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :-**

೧೯೭ (೨೫೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಅನುದಾನಿತ ಪ್ರಥಮದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಸದರಿ ಕಾಲೇಜುಗಳಿಗೆ ಮಂಜೂರಾಗಿರುವ ಬೋಧಕ/ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು (ಕಾಲೇಜುವಾರು, ವರ್ಗವಾರು ಮಾಹಿತಿ ನೀಡುವುದು) ;

(ಇ) ಸದರಿ ಕಾಲೇಜುಗಳಲ್ಲಿ ನಿವೃತ್ತಿ, ಇನ್ನಿತರೆ ಕಾರಣಗಳಿಂದ ತೆರವಾಗಿರುವ ಖಾಲಿ ಹುದ್ದೆಗಳ ಬೋಧಕ/ಬೋಧಕೇತರ ಸಂಖ್ಯೆ ಎಷ್ಟು ; ಯಾವ ಸಮಯದಿಂದ ತೆರವಾಗಿದೆ (ಕಾಲೇಜುವಾರು, ವರ್ಗವಾರು ಪೂರ್ಣ ಮಾಹಿತಿ ನೀಡುವುದು) ;

(ಈ) ದೀರ್ಘಕಾಲದಿಂದ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವುದು ?

## ಕನ್ನಡ ಮಾಧ್ಯಮ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಬೋಧಕ/ ಬೋಧಕೇತರರಿಗೆ ವೇತನ ಅನುದಾನ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೯೮ (೨೫೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕನ್ನಡ ಮಾಧ್ಯಮ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಬೋಧಕ/ಬೋಧಕೇತರರಿಗೆ ವೇತನ ಅನುದಾನವನ್ನು ನೀಡಲಾಗುತ್ತಿದೆಯೇ ;

(ಆ) ಹಾಗಾದರೆ, ಯಾವ ಸಾಲಿನವರೆಗೆ ಪ್ರಾರಂಭವಾಗಿರುವ ಶಾಲಾ ಕಾಲೇಜಿನ ಸಿಬ್ಬಂದಿಗಳಿಗೆ ವೇತನಾನುದಾನವನ್ನು ನೀಡಲಾಗುತ್ತಿದೆ ;

(ಇ) ಸದರಿ ವೇತನಾನುದಾನ ಮಂಜೂರಾತಿಗಾಗಿ ಕೋರಿ ಎಷ್ಟು ಸಂಸ್ಥೆಗಳಿಂದ ಪ್ರಸ್ತಾವನೆ ಸರ್ಕಾರದ ಹಂತಕ್ಕೆ ಬಂದಿವೆ ; ಅರ್ಜಿಗಳ ಸಂಖ್ಯೆ ಎಷ್ಟು ; ಯಾವ ಕಾಲಮಿತಿಯಲ್ಲಿ ಸದರಿ ಅರ್ಜಿಗಳಿಗೆ ವೇತನ ಅನುದಾನ ಮಂಜೂರು ಮಾಡಲಾಗುವುದು ;

(ಈ) ೧೯೯೭-೯೮ ಸಾಲಿನವರೆವಿಗೂ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಅನುದಾನರಹಿತ ಶಾಲಾಕಾಲೇಜುಗಳ ಸಿಬ್ಬಂದಿಗಳಿಗೆ ವೇತನಾನುದಾನವನ್ನು ಸರ್ಕಾರ ಮಂಜೂರು ಮಾಡಲು ಚಿಂತನೆ ನಡೆಸಿದೆಯೇ ; ಹಾಗಾದರೆ ಯಾವ ಕಾಲಮಿತಿಯಲ್ಲಿ ಸರ್ಕಾರದಿಂದ ವೇತನಾನುದಾನವನ್ನು ಘೋಷಣೆ ಮಾಡಲಾಗುವುದು ?

## ಸಂಯುಕ್ತ ಪದವಿ ಪೂರ್ವ ಕಾಲೇಜುಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೧೯೯ (೨೫೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸಂಯುಕ್ತ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಸದರಿ ಕಾಲೇಜುಗಳ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲೆ ವಿಭಾಗದಲ್ಲಿ ಮುಖ್ಯ ಶಿಕ್ಷಕರ ಹುದ್ದೆಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದರಿಂದ ಪ್ರೌಢಶಾಲಾ ವಿಭಾಗದ ಆಡಳಿತಕ್ಕೆ ತುಂಬಾ ತೊಂದರೆ ಉಂಟಾಗುತ್ತಿರುವುದು ಹಾಗೂ ವಿದ್ಯಾರ್ಥಿಗಳ ಫಲಿತಾಂಶಗಳ ಮೇಲೆ ಪರಿಣಾಮ ಬೀರುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ಹಾಗಾದರೆ, ಸದರಿ ಪ್ರೌಢಶಾಲಾ ವಿಭಾಗದಲ್ಲಿ ಆಡಳಿತ ವ್ಯವಸ್ಥೆಯನ್ನು ಯಾರಿಂದ ನಿರ್ವಹಿಸಲಾಗುತ್ತಿದೆ ; ಕಾರ್ಯನಿರ್ವಹಿಸುತ್ತಿರುವವರಿಗೆ ಯಾವ ಅಧಿಕಾರಗಳನ್ನು ವಹಿಸಿಕೊಡಲಾಗಿದೆ (ವಿವರಗಳೊಡನೆ) ;

(ಉ) ಸಂಯುಕ್ತ ಪದವಿಪೂರ್ವ ಕಾಲೇಜುಗಳ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ವಿಭಾಗಕ್ಕೆ ಮುಖ್ಯ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಯಾವ ಕಾಲಮಿತಿಯಲ್ಲಿ ಹುದ್ದೆಗಳಿಗೆ ಮಂಜೂರಾತಿ ನೀಡಲಾಗುವುದು ?

## ಅನುದಾನರಹಿತ ಪ್ರಥಮದರ್ಜೆ ಕಾಲೇಜುಗಳ ಬೋಧಕ/ ಬೋಧಕೇತರರು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೨೦೦ (೨೫೭) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೯೯೫ರ ಸಾಲಿನವರೆವಿಗೂ ಪ್ರಾರಂಭವಾಗಿರುವ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಸದರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ ಬೋಧಕೇತರರು ಸೇವಾ ಭದ್ರತೆ ಇಲ್ಲದೆ, ಕನಿಷ್ಠ ವೇತನವಿಲ್ಲದೆ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ದೀರ್ಘಕಾಲದಿಂದ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ಸರ್ಕಾರ ವೇತನಾನುದಾನವನ್ನು ನೀಡುವುದೇ ; ಯಾವ ಕಾಲಮಿತಿಯಲ್ಲಿ ವೇತನಾನುದಾನವನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳುವುದು ?

## ಅಕ್ರಮ ಮದ್ಯ ಮಾರಾಟ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೧ (೨೬೫) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮದ್ಯ ಮಾರಾಟದಲ್ಲಿ ಮುದ್ರಿತ ಬೆಲೆಗಿಂತ ಹೆಚ್ಚು ಬೆಲೆಯನ್ನು ಗ್ರಾಹಕರಿಂದ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅಂಗಡಿ ಮತ್ತು ಬಾರ್‌ಗಳಲ್ಲಿನ ಮಾಲೀಕರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ ; ಅಂಗಡಿ ಮತ್ತು ಮಾಲೀಕರ ಹೆಸರುಗಳೊಂದಿಗೆ (ಜಿಲ್ಲಾ ಮತ್ತು ತಾಲ್ಲೂಕುವಾರು) ; ಸಂಪೂರ್ಣ ಮಾಹಿತಿ ನೀಡುವುದು ;

(ಇ) ಹಾಗಿದಲ್ಲಿ, ಅಕ್ರಮವಾಗಿ ಹೆಚ್ಚು ಬೆಲೆ ಪಡೆಯುತ್ತಿರುವುದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣವಾದ ಮಾಹಿತಿ ನೀಡುವುದು) ?

## ಅತಿಥಿ ಉಪನ್ಯಾಸಕರ ಕೊರತೆ ಮತ್ತು ಖಾಯಂಗೊಳಿಸುವಿಕೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೦೨ (೨೬೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು ; ಅವರುಗಳ ಹೆಸರುಗಳೊಂದಿಗೆ ಮತ್ತು ಯಾವ ಯಾವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಈ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಿದೆ ;

(ಈ) ಸುಮಾರು ಒಂದು ವರ್ಷದಿಂದ ಅತಿಥಿ ಉಪನ್ಯಾಸಕರಿಗೂ ಸರಿಯಾಗಿ ಸಂಬಳ ನೀಡಲಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಎಷ್ಟು ಕಾಲೇಜುಗಳಲ್ಲಿ ಈ ಕೊರತೆ ಕಂಡು ಬರುತ್ತಿದೆ (ವಿವರ ನೀಡುವುದು) ?

## ದೈಹಿಕ ಶಿಕ್ಷಕರಿಗೆ ಮುಂಬಡ್ತಿ ನೀಡಲು ಇರುವ ಅಡೆತಡೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೨೦೩ (೨೬೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರಿ ಪ್ರಾಥಮಿಕ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ದೈಹಿಕ ಶಿಕ್ಷಣ ಶಿಕ್ಷಕರಿಗೂ ಹಾಗೂ ಇತರ ಶಿಕ್ಷಕರಿಗೂ ವೇತನ ಶ್ರೇಣಿಯಲ್ಲಿ ಯಾವುದೇ ವ್ಯತ್ಯಾಸವಿದೆಯೇ (ವಿವರ ನೀಡುವುದು) ;

(ಆ) ಇಲ್ಲದಿದ್ದಲ್ಲಿ ಮುಖ್ಯೋಪಾಧ್ಯಾಯ ಹುದ್ದೆಯ ವೃಂದಕ್ಕೆ ಬಡ್ತಿ ನೀಡುವಾಗ ದೈಹಿಕ ಶಿಕ್ಷಣ ಶಿಕ್ಷಕರನ್ನು ಕಡೆಗಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳೇನು ;

(ಇ) ದೈಹಿಕ ಶಿಕ್ಷಣ ಶಿಕ್ಷಕರು ಬಿ.ಎ.,/ಬಿ.ಎಸ್.ಸಿ., ಮತ್ತು ಬಿ.ಎಡ್., ಪದವಿ ಪಡೆದಿದ್ದರೆ ಆ ವಿಷಯಗಳನ್ನು ಬೋಧಿಸಲು ಅವರಿಗೆ ಪ್ರೌಢ ಶಾಲೆ ಶಿಕ್ಷಕರಾಗಿ ಮುಂಬಡ್ತಿ ನೀಡಲು ಇರುವ ಅಡೆತಡೆಗಳೇನು ; ಅವುಗಳನ್ನು ನಿವಾರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ?

## ಶ್ರೀ ದೇವರ ದಾಸಿಮಯ್ಯ ಜಯಂತಿಯನ್ನು ಸರ್ಕಾರ ಆಚರಿಸುವಂತಾಗಲಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೦೪ (೨೭೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆದ್ಯವಚನಕಾರ ಶ್ರೀ ದೇವರ ದಾಸಿಮಯ್ಯ ಜಯಂತಿ ಹಾಗೂ ನಿರ್ಬಂಧಿತ ರಜೆ ಯಾವಾಗಿನಿಂದ ಆಚರಣೆಗೆ ಬಂದಿದೆ ;

(ಆ) ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರಿ ಜಯಂತಿಯಾಗಿ ಆಚರಣೆ ಮಾಡಲು ಆದೇಶ ಮಾಡಿದ್ದರೂ ಇದುವರೆವಿಗೂ ಅನುಷ್ಠಾನಗೊಳ್ಳದಿರಲು ಕಾರಣವೇನು ;

(ಇ) ರಾಜ್ಯದ ಸುಮಾರು ೬೦ ಲಕ್ಷ ನೇಕಾರರ ಬೇಡಿಕೆಯನ್ನು ಸರ್ಕಾರ ತಿರಸ್ಕರಿಸಲು ಕಾರಣವೇನು ;

(ಈ) ಈ ವರ್ಷ ಸರ್ಕಾರಿ ಜಯಂತಿ ಮಾಡುವಂತೆ ಆದೇಶ ಮಾಡಿ ರಾಜ್ಯದ ಎಲ್ಲಾ ನೇಕಾರರಿಗೆ ಸಮಾನತೆಯ ಹಕ್ಕು ನೀಡಲಾಗುವುದೆ ?

## ತಾಲ್ಲೂಕು ಮಟ್ಟದ ಆಶ್ರಯ ಸಮಿತಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೦೫ (೨೭೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಾಲ್ಲೂಕು ಮಟ್ಟದ ಆಶ್ರಯ ಸಮಿತಿ ರಚನೆ ಮಾನದಂಡವೇನು ;

(ಆ) ಈ ಸಮಿತಿಯ ನಿರ್ವಹಣೆ ಹೇಗಿರುತ್ತದೆ (ಪೂರ್ಣ ವಿವರ ನೀಡುವುದು) ;

(ಇ) ಗ್ರಾಮೀಣ ಪ್ರದೇಶದ ಬಡಜನತೆಗೆ ಆಶ್ರಯ ಸೇರಿದಂತೆ ಬೇರೆ ಯಾವ ಯಾವ ಯೋಜನೆಗಳು ವಸತಿ ಯೋಜನೆಯಡಿ ಸೇರಿಸಲ್ಪಟ್ಟಿವೆ ;

(ಈ) ೨೦೧೩-೧೪ನೇ ಸಾಲಿನ ಅಂತ್ಯದ ವೇಳೆಗೆ ರಾಜ್ಯದಲ್ಲಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ; ನಿರ್ಮಾಣ ಹಂತದಲ್ಲಿರುವ ಮನೆಗಳೆಷ್ಟು ;

(ಉ) ಈ ವರ್ಷದಲ್ಲಿ ಇನ್ನೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಚಿಂತಿಸಿದೆಯೇ ?

## ಗ್ರಾಮೀಣಾಭಿವೃದ್ಧಿಯ ನೂತನ ಯೋಜನೆಗಳು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೨೦೬ (೨೭೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರ ಹೊಸ ಯೋಜನೆಗಳನ್ನು ರೂಪಿಸಿದೆಯೇ ; ಇದ್ದಲ್ಲಿ, ಅವು ಯಾವುವು ;

(ಆ) ತಾಲ್ಲೂಕುವಾರು ಹಂಚಿಕೆಯ ಮಾನದಂಡವೇನು ;

(ಇ) ಟಾಸ್ಕ್ ಫೋರ್ಸ್ ಸಮಿತಿಯ ರಚನೆ ಬಗ್ಗೆ ಪೂರ್ಣ ವಿವರ ನೀಡುವುದು ;

(ಈ) ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯನ್ನು ಉಲ್ಲಂಘನೆ ಮಾಡಿರುವ ಅಧಿಕಾರಿಗಳ ವಿರುದ್ಧ ತೆಗೆದುಕೊಳ್ಳುವ ಕ್ರಮಗಳೇನು ?

## ಶಾಲಾ ಮಕ್ಕಳಿಗೆ ಖರೀದಿಸಿದ ಸಮವಸ್ತ್ರದ ಬಾಬ್ತು ಬಿಡುಗಡೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೦೭ (೨೭೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ಯಾವ ಸಂಸ್ಥೆ ಸರಬರಾಜು ಮಾಡುತ್ತಿದೆ ;

(ಆ) ಎಷ್ಟು ವರ್ಷಗಳಿಂದ ಈ ಯೋಜನೆ ಜಾರಿಗೆ ಬಂದಿದೆ ; ೨೦೧೩–೧೪ರ ಸಾಲಿಗೆ ಎಷ್ಟು ಮಕ್ಕಳಿಗೆ ಬಟ್ಟೆ ಖರೀದಿ ಮಾಡಲಾಗಿದೆ ;

(ಇ) ಸಂಸ್ಥೆಗಳಿಂದ ಖರೀದಿ ಮಾಡಲು ಯಾವ ರೀತಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ;

(ಈ) ಸಮವಸ್ತ್ರ ಸರಿಯಾದ ಸಮಯಕ್ಕೆ ನೀಡಿದ್ದರೂ, ಆ ಸಂಸ್ಥೆಗಳಿಗೆ ಹಣ ಪಾವತಿಸಲು ವಿಳಂಬ ಮಾಡುತ್ತಿರುವುದರ ಕಾರಣವೇನು ;

(ಉ) ಬಡ ನೇಕಾರರು ಕಳೆದ ೬–೭ ತಿಂಗಳಿಂದ ಶಿಕ್ಷಣ ಇಲಾಖೆಗೆ ಹಣ ನೀಡುವಂತೆ ಒತ್ತಾಯಿಸುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಇದನ್ನು ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ಅದ್ಯವಚನಕಾರ ಶ್ರೀ ದೇವರ ದಾಸಿಮಯ್ಯ ಅಧ್ಯಯನ ಪೀಠ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೦೮ (೨೭೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಂಪೆಯ ವಿಶ್ವವಿದ್ಯಾಲಯದಲ್ಲಿ ಶ್ರೀ ದೇವರ ದಾಸಿಮಯ್ಯ ಅಧ್ಯಯನ ಪೀಠ ಯಾವಾಗ ಪ್ರಾರಂಭವಾಯಿತು ;

(ಆ) ಸರ್ಕಾರ ಈ ಅಧ್ಯಯನ ಪೀಠಕ್ಕೆ ಎಷ್ಟು ಹಣ ಮೀಸಲಿಟ್ಟಿದೆ ;

(ಇ) ಈ ಅಧ್ಯಯನ ಪೀಠಕ್ಕೆ ಯಾರ್ಯಾರು ಸದಸ್ಯರಿದ್ದಾರೆ ; ಇದರ ಕೆಲಸ ಕಾರ್ಯಗಳೇನು ; ಪ್ರತಿ ವರ್ಷ ಏನೇನು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ;

(ಈ) ಶ್ರೀ ದೇವರ ದಾಸಿಮಯ್ಯ ಅಧ್ಯಯನ ಪೀಠದ ಮೂಲಕ ಏನಾದರೂ ಸಂಶೋಧನೆ ಮಾಡಲಾಗಿದೆಯೇ (ವಿವರ ನೀಡುವುದು) ;

(ಉ) ಇದರ ಮುಂದಿನ ಕಾರ್ಯಯೋಜನೆಯೇನು ?

## ಅಂಗನವಾಡಿ ಕೇಂದ್ರಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೦೯ (೨೭೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ (ಎರಡು) ವರ್ಷಗಳಿಂದ ಇಲ್ಲಿಯವರೆಗೆ ಬೆಳಗಾಂ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾದ ಆಹಾರ ಸಾಮಗ್ರಿಗಳು ಹಾಗೂ ಇತರ ಸಾಮಗ್ರಿಗಳಿಗಾಗಿ ಖರ್ಚುಮಾಡಲಾದ ಮೊತ್ತವೆಷ್ಟು (ಪೂರ್ಣ ವಿವರ ನೀಡುವುದು) ;

(ಆ) ಮೇಲ್ಕಂಡ ಆಹಾರ ಧಾನ್ಯಗಳನ್ನು ಹಾಗೂ ಇಲಾಖೆ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಸಂಸ್ಥೆ/ವ್ಯಕ್ತಿಯಾರು (ವ್ಯಕ್ತಿ/ಸಂಸ್ಥೆಯ ವಿವರ ನೀಡುವುದು) ?

## ವಸತಿ ಹೀನರಿಗೆ ವಸತಿ ಸೌಲಭ್ಯ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೦ (೨೮೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾಂ ಜಿಲ್ಲೆಯಲ್ಲಿ ವಸತಿ ಹೀನರಿಗೆ ವಸತಿ ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಪ್ರಸಕ್ತ ಸಾಲಿನಲ್ಲಿ ಇಂದಿರಾ ಅವಾಸ್/ಆಶ್ರಯ/ಅಂಬೇಡ್ಕರ್/ಬಸವಶ್ರೀ ವಸತಿ ಯೋಜನೆಯಡಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ?

## ರೈಲು ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನ

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೧ (೨೮೩) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ–ಕುಡಚಿ ರೈಲು ಮಾರ್ಗ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಬೇಕಾದ ಭೂಮಿ ಎಷ್ಟು ; ಈಗಾಗಲೇ ಎಷ್ಟು ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಆ) ಬಾಗಲಕೋಟೆ ಜಿಲ್ಲೆಯ ಯಾವ ಯಾವ ತಾಲ್ಲೂಕಿನ ಎಷ್ಟೆಷ್ಟು ಭೂಮಿ ವಶಪಡಿಸಿಕೊಳ್ಳಲಾಗುವುದು (ವಿವರ ನೀಡುವುದು) ;

(ಇ) ಸ್ವಾಧೀನ ಪಡಿಸಿಕೊಂಡ ರೈತರ ನೀರಾವರಿ ಭೂಮಿಗೆ ಮತ್ತು ಒಣಬೇಸಾಯದ ಭೂಮಿಗೆ ಪ್ರತಿ ಎಕರೆಗೆ ನೀಡುವ ಪರಿಹಾರದ ಮೊತ್ತ ಎಷ್ಟು ?

## ಕುಡಿಯುವ ನೀರಿನ ಯೋಜನೆಗಳು

**ಶ್ರೀ ಸಿದ್ದರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೨೧೨ (೨೮೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೨ ವರ್ಷಗಳಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಯಾವ್ಯಾವ ಯೋಜನೆಗಳ ಅಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ;

(ಆ) ಎರಡೂ ಜಿಲ್ಲೆಗಳಿಗೆ ಈ ನಿಟ್ಟಿನಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳೆಷ್ಟು ಮತ್ತು ಪ್ರಗತಿಯಲ್ಲಿರುವ ಯೋಜನೆಗಳೆಷ್ಟು ;

(ಇ) ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸುವ ನಿಟ್ಟಿನಲ್ಲಿ ಹೊಸ ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ (ಇದ್ದರೆ ವಿವರ ಒದಗಿಸುವುದು) ?

## ಸುವರ್ಣ ಗ್ರಾಮಗಳ ಯೋಜನೆ ಮುಂದುವರಿಕೆ

**ಶ್ರೀ ಸಿದ್ದರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೨೧೩ (೨೮೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಸರ್ಕಾರದಲ್ಲಿ ಘೋಷಿಸಲಾದ ಸುವರ್ಣ ಗ್ರಾಮ ಯೋಜನೆಗಳನ್ನು ಮುಂದುವರೆಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯ ; ಇದ್ದರೆ, ಪ್ರಸ್ತಾವನೆ ಯಾವ ಹಂತದಲ್ಲಿದೆ ;

ಯಾವಾಗ ಪೂರ್ಣಗೊಳ್ಳಲಿದೆ ; ಇಲ್ಲದಿದ್ದರೆ, ಈ ಯೋಜನೆಯನ್ನು ಮುಂದುವರೆಸದಿರುವುದಕ್ಕೆ ಕಾರಣಗಳೇನು (ವಿವರ ನೀಡುವುದು) ;

(ಆ) ಹಿಂದಿನ ಸರ್ಕಾರದ ಸುವರ್ಣ ಗ್ರಾಮಗಳ ಯೋಜನೆಯ ಘೋಷಣೆಯನ್ನು ಕೈ ಬಿಡುವುದಾದರೆ ಪ್ರಸ್ತುತ ಸರ್ಕಾರ ಯಾವಾಗ ಸುವರ್ಣ ಗ್ರಾಮಗಳ ನೂತನ ಯೋಜನೆಯನ್ನು ಘೋಷಿಸುವುದು ; ಎಷ್ಟು ಅನುದಾನ ಒದಗಿಸಲಾಗುವುದು ?

## ಕಂಪ್ಯೂಟರ್ ಶಿಕ್ಷಕರ ಹುದ್ದೆಗಳ ಕುರಿತು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) :–**

೨೧೪ (೨೮೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣ ಕೊಡುವ ಉದ್ದೇಶದಿಂದ ಕಂಪ್ಯೂಟರ್‌ಗಳನ್ನು ನೀಡಲಾಗಿದೆ ;

(ಆ) ಎಷ್ಟು ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಕರು ಇದ್ದು ಕಂಪ್ಯೂಟರ್ ಬೋಧನಾ ಕಾರ್ಯ ನಡೆಸುತ್ತಿದ್ದಾರೆ ; ಉಪಕರಣಗಳಿದ್ದು ಬೋಧಕರು ಇರದೇ ಇರುವ ಕಾರಣಕ್ಕಾಗಿ ಬೋಧನಾ ಕಾರ್ಯ ನಡೆಯದೇ ಇರುವ ಶಾಲೆಗಳೆಷ್ಟು ; ಇನ್ನು ಎಷ್ಟು ಶಾಲಾ ಕಾಲೇಜುಗಳಿಗೆ ಕಂಪ್ಯೂಟರ್ ಉಪಕರಣಗಳನ್ನು ಮತ್ತು ಶಿಕ್ಷಕರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದಿದೆ ;

(ಇ) ಪದವಿ ಪೂರ್ವ ಶಿಕ್ಷಣ ಇಲಾಖೆಯ ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಈ ಹಿಂದೆ ದೈಹಿಕ ಶಿಕ್ಷಣ ಶಿಕ್ಷಕರೆಂದು ಪರಿಗಣಿಸಿ ದಿನಾಂಕ : ೨೯–೦೫–೨೦೧೪ ರಂದು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ಉಪನ್ಯಾಸಕರೆಂದು ತಿದ್ದುಪಡಿಯಾಗಿರುತ್ತದೆ. ಈಗಾಗಲೇ

ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ದೈಹಿಕ ಉಪನ್ಯಾಸಕರ ವೇತನ ಶ್ರೇಣಿಯನ್ನು ಯಾವಾಗ ಪರಿಗಣಿಸಲಾಗುವುದು ;

(ಈ) ಪ್ರಾಥಮಿಕ ಮತ್ತು ಪ್ರೌಢ ದೈಹಿಕ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಾವಳಿ ರಚನೆ ಕಾರ್ಯ ಯಾವ ಹಂತದಲ್ಲಿದೆ ; ಯಾವಾಗ ಪೂರ್ಣಗೊಳಿಸಿ ಜಾರಿಗೊಳಿಸಲಾಗುವುದು ;

(ಉ) ಟಿ.ಜಿ.ಟಿ. ಶಿಕ್ಷಕರನ್ನು ಯಾವ ವೃಂದದ ಶಿಕ್ಷಕರೆಂದು ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಡಿ ನೇಮಕ ಮಾಡಿಕೊಳ್ಳಲಾಗಿದೆ ;

(ಊ) ರಾಜ್ಯದಲ್ಲಿ ಒಟ್ಟು ಎಷ್ಟು ಜನ ಯಾವ ಯಾವ ವರ್ಷದಲ್ಲಿ ನೇಮಕವಾಗಿದ್ದಾರೆ ಮತ್ತು ಯಾವ ಯಾವ ವೃಂದ ನೇಮಕಾತಿ ನಿಯಮಗಳಡಿ ಆಯ್ಕೆಯಾಗಿದ್ದಾರೆ ;

(ಋ) ಈ ಎಲ್ಲಾ ಟಿ.ಜಿ.ಟಿ. ಶಿಕ್ಷಕರು ಈಗ ಯಾವ ಯಾವ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ; ಇವರ ಸಂಬಳ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ಬಟವಾಡೆಯಾಗುತ್ತಿದೆಯೇ ?

## ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸಹಾಯಧನ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೫ (೩೦೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಡಿ ವಿವಿಧ ಉದ್ದಿಮೆಗಳ ಸ್ಥಾಪನೆಗೆ ಸಹಾಯಧನಕ್ಕಾಗಿ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಮಂಜೂರಾತಿ ದೊರೆತ ಅರ್ಜಿಗಳೆಷ್ಟು ;

(ಇ) ಮಂಜೂರಾತಿಗೆ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅರ್ಜಿದಾರರ ಹೆಸರು, ವಿಳಾಸ, ಉದ್ದೇಶದೊಂದಿಗೆ ವಿವರ ನೀಡುವುದು) ?

**ಕಾಮಗಾರಿಗಳ ನಿರ್ವಹಣೆಗೆ ಅಭಿಯಂತರರ ಕೊರತೆ**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೬. (೩೦೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಂದ ನಿರ್ವಹಿಸಲ್ಪಡುತ್ತಿರುವ ಕಾಂಕ್ರೀಟ್ ರಸ್ತೆಗಳ ಗುಣಮಟ್ಟ ಹಾಗೂ ತಂತ್ರಜ್ಞಾನ ಸಮರ್ಪಕವಾಗಿರದೆ ಕಲ್ಲು, ಮರಳು ಸಾಗಿಸುವಂತಹ ಭಾರೀ ಗಾತ್ರದ ವಾಹನಗಳ ಸಂಚಾರದಿಂದಾಗಿ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಇಂತಹ ರಸ್ತೆಗಳಲ್ಲಿ ವಾಹನ ಸಂಚಾರವನ್ನು ನಿಯಂತ್ರಿಸಲಾಗುವುದೇ ; ಅಥವಾ ತಂತ್ರಜ್ಞಾನವನ್ನು ಬದಲಾಯಿಸಲಾಗುವುದೇ ;

(ಆ) ಸದರಿ ಇಲಾಖೆಯಲ್ಲಿ ಅಭಿಯಂತರರುಗಳ ಕೊರತೆಯಿಂದಾಗಿ ಕಾಮಗಾರಿಗಳ ಕಾರ್ಯ ನಿರ್ವಹಣೆಯಲ್ಲಿ ಅಭಿಯಂತರರುಗಳ ಪರಿವೀಕ್ಷಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಬಹುಗ್ರಾಮ ಕುಡಿಯುವ ನೀರಿನ ಯೋಜನೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೭ (೩೦೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವವಿರುವ ಗ್ರಾಮಗಳು ಯಾವುವು ; ಮತ್ತು ಈ ಅಭಾವವನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ತುಂಬಿ ಹರಿಯುವ ನದಿಗಳಿದ್ದು, ಅವುಗಳನ್ನು ಬಳಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಾಡುವ ಯೋಚನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಇಲ್ಲವಾದಲ್ಲಿ ಕಾರಣವೇನು ?

## ಉಡುಪಿ ಜಿಲ್ಲೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಹೊಂದಿರದ ಪ್ರೌಢಶಾಲೆಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೮ (೩೦೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಮೂಲಭೂತ ಅವಶ್ಯಕತೆಗಳನ್ನು ಹೊಂದದೆ ಇರತಕ್ಕಂತಹ ಪ್ರೌಢಶಾಲೆಗಳು ಯಾವುವು ; ಈ ಪ್ರೌಢಶಾಲೆಗಳು ಯಾವಾಗ ಪ್ರಾರಂಭಗೊಂಡವು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಜಿಲ್ಲೆಯಲ್ಲಿ ಇಂತಹ ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಕ್ರಮ ಕೈಗೊಳ್ಳದೆ ಇದ್ದಲ್ಲಿ ಕಾರಣಗಳೇನು ?

## ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಶೋಷಣೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :–**

೨೧೯ (೩೦೦) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗದಲ್ಲಿರುವ ಜವಾಹರಲಾಲ್ ಇಂಜಿನಿಯರಿಂಗ್ ಕಾಲೇಜು ಯಾವಾಗ ಪ್ರಾರಂಭಗೊಂಡಿತು ; ಈ ಇಂಜಿನಿಯರಿಂಗ್ ಕಾಲೇಜಿಗೆ ಸರ್ಕಾರದಿಂದ ನೀಡಲ್ಪಟ್ಟಿರುವ ಸೌಲಭ್ಯಗಳು ಯಾವುವು ;

(ಆ) ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳು ವರ್ಗಾವಣೆ ಪತ್ರ ಕೋರಿದರೆ ದಂಡನೆ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಾನೂನು ಬಾಹಿರವಾಗಿ ವಿದ್ಯಾರ್ಥಿಗಳನ್ನು ಶೋಷಿಸುವ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರದ ನಿಯಂತ್ರಣವೇನು ?

## ರಸ್ತೆ ಡಾಂಬರೀಕರಣ

**ಶ್ರೀ ಬಸವರಾಜ ಹಾವಗಿಯಪ್ಪ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು ) :–**

೨೨೦ (೧೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪-೧೫ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಕದಲಗೆರೆಯಿಂದ ಕಾಡೇನಹಳ್ಳಿ

ಗ್ರಾಮದ ರಸ್ತೆ ಡಾಂಬರೀಕರಣಕ್ಕಾಗಿ ಮಂಜೂರಾದ ಹಣವೆಷ್ಟು; ಸದರಿ ಹಣದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ (ಪೂರ್ಣ ವಿವರವನ್ನು ನೀಡುವುದು) ;

(ಆ) ಹಾಗಿದ್ದಲ್ಲಿ, ಮೇಲ್ಕಂಡ ರಸ್ತೆಯ ಕಾಮಗಾರಿಯು ಕಳಪೆ ಮಟ್ಟದಿಂದ ಕೂಡಿದ್ದು ಮಳೆಗಾಲಕ್ಕೆ ಮೊದಲೇ ರಸ್ತೆಯು ಸಂಪೂರ್ಣ ಹಾಳಾಗಿ ಸಂಚಾರಕ್ಕೆ ಯೋಗ್ಯವಲ್ಲದ ರೀತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ರಸ್ತೆಗಳ ಡಾಂಬರೀಕರಣದ ಕಾಮಗಾರಿಯ ಗುತ್ತಿಗೆಯನ್ನು ಯಾರಿಗೆ ನೀಡಲಾಗಿತ್ತು ; ಗುತ್ತಿಗೆಗೆ ನೀಡಲಾದ ಮೊತ್ತವೆಷ್ಟು (ಗುತ್ತಿಗೆದಾರರ ವಿವರ ನೀಡುವುದು) ;

(ಈ) ರಸ್ತೆಗಳ ಡಾಂಬರೀಕರಣ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮಕೈಗೊಳ್ಳಲಾಗುವುದು (ಸಂಪೂರ್ಣ ವಿವರ ನೀಡುವುದು) ?

## ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುತ್ತಿಗೆ ಶಿಕ್ಷಕರ ನೇಮಕ

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) :-**

೨೨೧ (೨೩೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ನೀಗಿಸಲು ಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಲಾಗಿದೆಯೇ ;

(ಆ) ಹಾಗಿದ್ದಲ್ಲಿ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅನುಸರಿಸಿರುವ ಮಾನದಂಡಗಳೇನು ;

(ಇ) ಹೀಗೆ ಗುತ್ತಿಗೆ ಆಧಾರದ ಮೇಲೆ ಎಷ್ಟು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ (ಜಿಲ್ಲಾವಾರು ಪೂರ್ಣ ವಿವರವನ್ನು ನೀಡುವುದು) ?

**ಪಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ-2, ಬೆಂ-59/ಕಾ.ಸೂ. 3352/1000 ಪ್ರತಿಗಳು/19-06-2014